ಆದಿಲಶಾಹಿ ಸಾಹಿತ್ಯ ಸಂಪುಟ : ೧೮

ಕನ್ನಡದಲ್ಲಿ ಬಳಕೆಯಲ್ಲಿರುವ ಅರೇಬಿಕ್, ಪರ್ಶಿಯನ್ ಶಬ್ದಗಳು

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೮

ಕನ್ನಡದಲ್ಲಿ ಬಳಕೆಯಲ್ಲಿರುವ ಅರೇಬಿಕ್, ಪರ್ಶಿಯನ್ ಶಬ್ದಗಳು

ಆದಿಲಶಾಹಿ ಸಾಹಿತ್ಯ ಸಂಪುಟ : ೧೮

ಕನ್ನಡದಲ್ಲಿ ಬಳಕೆಯಲ್ಲಿರುವ ಅರೇಬಿಕ್, ಪರ್ಶಿಯನ್ ಶಬ್ದಗಳು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

Kannadadalli balakeylliruva Arabic, Persian Shabdagalu – (Day today usage of Arabic, Persian words in Kannada language) - Compiled by Dr. Krishna Kolharkulkarni

Published by : **Dr. P.G.Halakatti Research Centre,**
B.L.D.E. Association, Vijayapur, Karnataka

Edition : **2017**

Pages : **xxviii + 178 = 206**

Copies : **1000**

Price : **Rs. 200.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru-40
Mob : 97390 67359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಕನ್ನಡದಲ್ಲಿ ಬಳಕೆಯಲ್ಲಿರುವ ಅರೇಬಿಕ್, ಪರ್ಶಿಯನ್ ಶಬ್ದಗಳು –

ಸಂಗ್ರಹ : ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಹಕ್ಕುಗಳು : ಪ್ರಕಾಶಕರು

ಆವೃತ್ತಿ : ಪ್ರಥಮ ೨೦೧೭

ಪುಟಗಳು : xxviii + ೧೭೮ = ೨೦೬

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು–೪೦.
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

(ದಿನಾಂಕ ೩೦-೮-೨೦೧೫ರ ವರೆಗೆ)

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಯಪುರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು-ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರವರೆಗೆ ರಾಜ್ಯಭಾರ ಮಾಡಿದ ರಾಜಮನೆತನವಿದು. 'ದೀನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕ್ಬರ್‌ನಂತೆ 'ದಾದ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಷಹನು ಸಮನ್ವಯ ಸಮಾಜಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ-ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು

ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ, ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯದ ಖಣಿ, ಉರ್ದು–ಪರ್ಶಿಯನ್ ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಸೂತಕಗಳನ್ನು ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ–ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ. ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇವರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾ ಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು.ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿ ವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೋಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–

ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮ ಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ಎಂ.ಎಸ್.ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿ ವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ.೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ–ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦–೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ

ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ, ಶ್ರೀ ರಂಜಾನ್ ದರ್ಗಾ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಬಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫೆರಿಸ್ತಾ : ತಾರೀಖ-ಇ-ಫೆರಿಸ್ತಾ [ಪರ್ಶಿಯನ್]**
ಇಂಗ್ಲೀಷಿಗೆ ಅನುವಾದಿಸಿದ್ದಾರೆ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ.೧೮೮೯] ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ : ಇಬ್ರಾಹಿಮನಾಮಾ [ದಖಣಿ]**
ಪ್ರಕಟವಾಗಿದೆ. ಮೂಲ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಔಂಧ ಅರ್ಕೀವ್ಸ ಸಾತಾರಾದಲ್ಲಿವೆ.

೩. **ಅಸದಬೇಗ : ವಾಕಾಯತೆ ಅಸದಬೇಗ [ಪರ್ಶಿಯನ್]**

ಚಾಪ್‌ಮನ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿ ಭಾಗಶಃ ಅನುವಾದವಾಗಿದೆ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]**
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ ಹೈದ್ರಾಬಾದಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]**
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ.ಭಾಗಶಃ ಬಿ.ಡಿ.ವರ್ಮಾರಿಂದ ಇಂಗ್ಲಿಷಿನಲ್ಲಿ ಅನುವಾದ.

೬. **ನುಸ್ರತಿ : ಅಲಿನಾಮಾ [ದಖಣಿ]**
ಪ್ರಕಟವಾಗಿದೆ. ಪ್ರತಿ ದುರ್ಮಿಳ.

೭. **ಬಶೀರುದ್ದೀನ ಅಹ್ಮದ : ವಾಕಾತೆ ಮಾಮಲಕತ್ ಬಿಜಾಪುರ [ಉರ್ದು]**
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ : ಘುತುಹತೆ ಆದಿಲಶಾಹಿ [ಪರ್ಶಿಯನ್]**
ಮುಂಬಯಿ ಅರ್ಕೀವ್ಸ, ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ : ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್‌ಜೈನುದ್ದೀನ ಅಲ್ ಮಾಬಾರಿ: ತುಹಫತುಲ್ ಮುಜಾಹಿದೀನ [ಪರ್ಶಿಯನ್]**

೧೧. **ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು]**

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ : ಅಹವಾಲೆ ಸಲಾತೀನ ಬಿಜಾಪುರ [ಪರ್ಶಿಯನ್]**
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸಿ [ಪರ್ಶಿಯನ್]**
ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದ್ರಾಬಾದ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ [ದಖಣಿ ಹಿಂದಿ]**
ಕರ್ನಾಟಕ ವಿ.ವಿ.ಯಿಂದ ಪುಸ್ತಕ ಪ್ರಕಟವಾಗಿದೆ.

೧೫. **ಜುಬೇರಿ : ರೌಜತ್ ಅಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್]**
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಹಸ್ತಪ್ರತಿ ಸಂಖ್ಯೆ ೧೪೮೧೩

೧೬. **ಜುಬೇರಿ : ಬುಸಾತಿನೆ ಸಲಾತೀನ [ಪರ್ಶಿಯನ್]**
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಸಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿ ಖಾನ: ಗುಲದಸ್ತಾ ಎ ಬಿಜಾಪುರ [ದಖಣಿ]**
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಬಿಜಾಪುರ ಸೂಫಿ ಸಂತರ ಚರಿತ್ರೆ ೧೭೯೬] [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು:** ಭಾರತ ಇತಿಹಾಸ ಸಂಶೋಧಕ ಮಂಡಳ [ಸಾವಿರಕ್ಕೂ ಮಿಕ್ಕಿ] **ಮತ್ತು ಸನದುಗಳು** ಪುಣೆ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : **ತಾರೀಖೆ ಅಲಿ ಆದಿಲಶಹ [ದಖಣಿ]**

೨. ಮೀರ್ ರಫೀಯುದ್ದೀನ ಶಿರಾಜಿ : **ತದ್ಕಿರಾತ–ಅಲ್–ಮುಲ್ಕ [ಪರ್ಶಿಯನ್]**

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : **ಹಪ್ತ ಕುರ್ಸೀ [ಪರ್ಶಿಯನ್]**

೪. ಮೀರ ಅಹಮದ ಅಲಿ ಖಾನ : **ಗುಲದಸ್ತಾ ಎ ಬಿಜಾಪುರ [ದಖಣಿ]**

೫. ಜುಹೂರ್ ಬಿನ್ ಜುಹೂರಿ : **ಮಹಮ್ಮದನಾಮಾ [ಪರ್ಶಿಯನ್]**

ಇದಲ್ಲದೆ, ಫೆರಿಸ್ತಾನ ತಾರೀಖ-ಇ-ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಘುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾದ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ. ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಘತ್‌ಉಲ್ಲಾಹ್, ಬೆಂಗಳೂರು

೧೪. ಡಾ. ಮಹನೂರ್ ಜಮಾನಿ ಬೇಗಂ, ಬೆಂಗಳೂರು

೧೫. ಪ್ರೊ. ಎ.ಎಚ್. ಮಾಸಾಪತಿ, ಬೆಂಗಳೂರು

೧೬. ಫಕೀರ್ ಮುಹಮ್ಮದ ಕಟ್ಪಾಡಿ, ಬೆಂಗಳೂರು

೧೭. ಮೌಲಾನಾ ಸಯ್ಯದ್ ರಶೀದ್ ಅಲ್ ಖಾಸಿಮಿ, ಬೆಂಗಳೂರು

೧೮. ಶ್ರೀ ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

ಈ ಮಹನೀಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ : ೪ ಸಂಪುಟಗಳು.

೨. ಬುಸಾತಿನೆ ಸಲಾತೀನ : ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಫುತುಹತೆ ಅಲಂಗೀರ ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ೧೦ನೆಯ ಸಂಪುಟ

೮. 'ಕಿತಾಬೆ ನವರಸ' ೧೧ನೆಯ ಸಂಪುಟ

೯. ರೌಜತುಲ್ ಔಲಿಯಾಯೆ ಬಿಜಾಪುರ ೧೨ನೆಯ ಸಂಪುಟ.

೧೦. ಕರ್ನಾಟಕದಲ್ಲಿಯ ಅರೇಬಿಕ್, ಪರ್ಶಿಯನ್, ಉರ್ದು ಶಾಸನಗಳ ಸೂಚಿ ೧೩ನೆಯ ಸಂಪುಟ

೧೧. ಫರ್ಮಾನುಗಳು ಭಾಗ ೧, ೧೪ನೆಯ ಸಂಪುಟ

೧೨. ಫರ್ಮಾನುಗಳು, ಸನದುಗಳು ಮತ್ತು ಕೈಫಿಯತ್ತುಗಳು ಭಾಗ ೨, ೧೫ನೆ ಸಂಪುಟ

೧೩. ತಾರೀಖ–ಇ–ಅಲಿ ಆದಿಲಶಹ, ೧೬ನೆಯ ಸಂಪುಟ

೧೪. 'ತುಹಫತ್-ಅಲ್-ಮುಜಾಹಿದೀನ, ಅಸದಬೇಗನ ನೆನಪುಗಳು, ಆದಿಲಶಾಹಿಗಳ ಸ್ಥಾನೀಯ ಆಡಳಿತ' ೧೭ನೆಯ ಸಂಪುಟ

ಹೀಗೆ ೧೭ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೮ ನೆಯ ಸಂಪುಟವಾಗಿ **'ಕನ್ನಡದಲ್ಲಿ ಬಳಕೆಯಲ್ಲಿರುವ ಅರೇಬಿಕ್, ಪರ್ಶಿಯನ್ ಶಬ್ದಗಳು'** ಪ್ರಕಟವಾಗುತ್ತಿದೆ. ಇದನ್ನು ಸಂಗ್ರಹಿಸಿದವರು, **ಡಾ. ಕೃಷ್ಣ ಕೊಲ್ಹಾರಕುಲಕರ್ಣಿ,** ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಇದು ಯೋಜನೆಯ ಕೊನೆಯ ಸಂಪುಟ. 'ಆದಿಲಶಾಹಿ ಸಾಹಿತ್ಯ ಅನುವಾದ' ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ, ಶ್ರೀ ಡಿ. ರಂದೀಪ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಬಿ ಶಿವಕುಮಾರ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಕರ್ನಾಟಕದಲ್ಲಿ ಸರಿ ಸುಮಾರು [ಕ್ರಿ.ಶ.೧೩೪೭– ೧೯೪೮] ಆರು ನೂರು ವರುಷಗಳಕಾಲ ನಾಡಿನ ಒಂದಿಲ್ಲೊಂದು ಪ್ರದೇಶದಲ್ಲಿ ಪರ್ಶಿಯನ್ ಭಾಷೆ ರಾಜ ಭಾಷೆಯಾಗಿತ್ತು. ಜೊತೆಗೆ ಅರೇಬಿಕ್ ಭಾಷೆಯೂ ಪ್ರಚಲಿತದಲ್ಲಿತ್ತು. ವಿಶೇಷವಾಗಿ ಕ್ರಿ.ಶ.೧೩೪೭ರಲ್ಲಿ ಮೊದಲು ಕಲಬುರ್ಗಿ ನಂತರ ಬೀದರ ನಗರಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಬಹಮನಿ ಸುಲ್ತಾನರು, [ಕ್ರಿ.ಶ. ೧೩೪೭–೧೪೯೦] ಅನಂತರ ಬೀದರದ ಬರೀದಶಾಹಿ, ವಿಜಯಪುರದ ಆದಿಲಶಾಹಿಗಳು [ಕ್ರಿ. ಶ.೧೪೯೦–೧೬೮೬] ಈ ನಾಡನ್ನು ಆಳಿದರು. ವಿಜಯನಗರ ಸಾಮ್ರಾಜ್ಯ ಪತನಾನಂತರ [ಕ್ರಿ. ಶ. ೧೫೬೫] ಇಂದಿನ ಕರ್ನಾಟಕದ ಬಹುತೇಕ ಪ್ರದೇಶಗಳು ಆದಿಲಶಾಹಿಗಳ ಅಧೀನಕ್ಕೆ ಒಳಪಟ್ಟಿದ್ದುವು. ಕರ್ನಾಟಕವನ್ನು ದಾಟಿ ತಂಜಾವುರವರೆಗೂ ಅವರ ರಾಜ್ಯ ಹಬ್ಬಿತ್ತು. ಅನಂತರದ ಕೆಲವು ಕಾಲ ಮೊಗಲರ ಅಧೀನದಲ್ಲಿ, ಮತ್ತೆ ದೇಶಕ್ಕೆ ಸ್ವಾತಂತ್ರ್ಯ ದೊರೆಯುವವರೆಗೂ ಕರ್ನಾಟಕದ ಕೆಲವು ಪ್ರದೇಶಗಳು ಹೈದರಾಬಾದಿನ ಅಸಫಜಾಹೀ ಅಧೀನದಲ್ಲಿದ್ದುವು. ಮಧ್ಯದ ಕೆಲವು ವರುಷಗಳ ಕಾಲ ಮೈಸೂರು ಸಂಸ್ಥಾನ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಡಳಿತಕ್ಕೊಳಪಟ್ಟಿತ್ತು. ಪ್ರಮುಖವಾಗಿ ಇವರುಗಳಲ್ಲದೆ ಅಲ್ಲಲ್ಲಿ ಸವಣೂರ, ಶಿರಾ ಮೊದಲಾದೆಡೆಗಳಲ್ಲಿ ನವಾಬರಿದ್ದರು. ಈ ಕಾಲದಲ್ಲಿ ಪರ್ಶಿಯನ್ ಭಾಷೆ ರಾಜಭಾಷೆಯಾಗಿತ್ತು. ಬಹುತೇಕ ಎಲ್ಲ ಪತ್ರ ವ್ಯವಹಾರಗಳು, ಒಪ್ಪಂದಗಳು, ಸನದುಗಳು, ಫರ್ಮಾನುಗಳು, ಕೈಫಿಯತ್ತುಗಳು, ಜಹಗೀರು, ಇನಾಮ ಪತ್ರಗಳು ಪರ್ಶಿಯನ್ ಭಾಷೆಯಲ್ಲಿದ್ದುವು.

ಈ ದಿನಗಳಲ್ಲಿ ವಿಶ್ವ ಪ್ರಸಿದ್ಧಿ ಹೊಂದಿದ ಅನೇಕ ಕಾವ್ಯಗಳು, ಸಾಹಿತ್ಯ ಕೃತಿಗಳು, ಇತಿಹಾಸ ಕೃತಿಗಳು ಮತ್ತು ಶಿಲಾಶಾಸನಗಳು ಪರ್ಶಿಯನ್, ಅರೇಬಿಕ್ ಭಾಷೆಗಳಲ್ಲಿ

ಕರ್ನಾಟಕದ ನೆಲದಲ್ಲಿ ರೂಪುಗೊಂಡಿವೆ. ಆಡಳಿತಗಾರರು ಪರ್ಶಿಯನ್ ಭಾಷೆಗೆ ಒಲವು ತೋರಿದ್ದರಿಂದ ಆಡಳಿತ, ನ್ಯಾಯಾಂಗ ಅಲ್ಲದೆ ದೈನಂದಿನ ವ್ಯವಹಾರಗಳಲ್ಲೂ ಪರ್ಶಿಯನ್ ಭಾಷೆ ಬಳಕೆಯಲ್ಲಿ ಬಂದಿತು. ಅವರ ಆಡಳಿತ ಮುಗಿಯಿತು. ಅವರು ಹೋದರು ಆದರೆ ಅವರು ಬಿಟ್ಟು ಹೋದ ಪರ್ಶಿಯನ್, ಅರೇಬಿಕ್ ಶಬ್ದಗಳು ಉಳಿದುಕೊಂಡುವು. ಮೈಸೂರು ಅರಸರು ತಮ್ಮ ಹಲವಾರು ಶಿಲಾಶಾಸನಗಳನ್ನು ಪರ್ಶಿಯನ್, ಅರೇಬಿಕ್ ಭಾಷೆಗಳಲ್ಲಿ ಕೆತ್ತಿಸಿದ್ದರೆ, ಆಡಳಿತದಲ್ಲಿ ಪರ್ಶಿಯನ್ ಶಬ್ದಗಳೇ ಅಧಿಕವಾಗಿದ್ದುವು. (ನೋಡಿ– ೧೩ನೆಯ ಸಂಪುಟ, 'ಕರ್ನಾಟಕದಲ್ಲಿಯ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು) ಇಂದು ಆ ಶಬ್ದಗಳಲ್ಲಿಯ ಹಲವಾರು ಶಬ್ದಗಳು ಕನ್ನಡ ಶಬ್ದಗಳೇ ಆಗಿ ಮಾರ್ಪಾಡುಗೊಂಡಿವೆ. ಒಂದಿಷ್ಟು ಆಳವಾಗಿ ಒಳಹೊಕ್ಕು ನೋಡಿದಾಗ ಇಂದು ನಾವು ಮಾತನಾಡುವ ದಿನಬಳಕೆಯ ಕನ್ನಡ ಭಾಷೆಯಲ್ಲಿ ಪ್ರತಿಶತ ೩೦ಕ್ಕಿಂತ ಅಧಿಕವಾಗಿ ಶಬ್ದಗಳು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳದ್ದಾಗಿವೆ ! ಅವುಗಳು ಇಂದಿನ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರತಿನಿತ್ಯ ಬಳಕೆಯಲ್ಲಿವೆ. ಅದಕ್ಕೆ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂಬ ಭೇದವಿಲ್ಲ. ಕೆಲವು ಶಬ್ದಗಳು ಎಲ್ಲ ಕಡೆಗೂ ಬಳಕೆಯಲ್ಲಿವೆ. ಇನ್ನು ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಬಳಕೆಯಲ್ಲಿವೆ. ಹಾಗೆ ಪಟ್ಟಿ ಮಾಡಿದಾಗ ಸುಮಾರು ನಾಲ್ಕು ಸಾವಿರದಷ್ಟು ಶಬ್ದಗಳು ದೊರೆತವು. ಅದುವೆ ಈ 'ಕನ್ನಡದಲ್ಲಿ ದಿನಬಳಕೆಯಲ್ಲಿರುವ ಪರ್ಶಿಯನ್, ಅರೇಬಿಕ್ ಶಬ್ದಕೋಶ'. ಮಾದರಿಗಾಗಿ ಕೆಲವನ್ನು ನೋಡಬಹುದು.

ಕರ್ನಾಟಕ ಸರಕಾರದ ಆಡಳಿತದಲ್ಲಿ ಎಷ್ಟೊಂದು ಪರ್ಶಿಯನ್ ಅರೇಬಿಕ್ ಶಬ್ದಗಳು ನುಸುಳಿಕೊಂಡಿವೆ ಎಂದರೆ, ಕರ್ನಾಟಕ ಸರಕಾರದಲ್ಲಿಯ **'ಸರಕಾರ'** ಶಬ್ದ ಪರ್ಶಿಯನ್ ಶಬ್ದ ! ರಾಜ್ಯದ ಆಡಳಿತದಲ್ಲಿ ಪಾತ್ರ ವಹಿಸಬೇಕೆಂದರೆ, ಪ್ರಜಾಪ್ರಭುತ್ವದ ಈ ದಿನಗಳಲ್ಲಿ ಮೊದಲು ಚುನಾವಣೆಯಲ್ಲಿ ಉಮೇದುವಾರನಾಗಿ ಸ್ಪರ್ಧಿಸಿ ಆಯ್ಕೆಯಾಗಬೇಕು. ಇಲ್ಲಿಯ **ಉಮೇದುವಾರ** ಅರೇಬಿಕ್ ಶಬ್ದ. ಆಯ್ಕೆಯಾಗಿ ಬಂದನಂತರ ಅವರ ನಶೀಬು ಇದ್ದರೆ ಯಾವುದೋ ಇಲಾಖೆ ಅಥವಾ ಖಾತೆಯ ಸಚಿವರು ಇಲ್ಲವೆ ಜಿಲ್ಲಾ ಪಂಚಾಯತಿ, ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರೆ ಅಧ್ಯಕ್ಷರೂ ಆಗಬಹುದು, ಇಲ್ಲಿಯ **ನಶೀಬ, ಖಾತೆ, ಇಲಾಖೆ** ಎಲ್ಲವೂ ಪರ್ಶಿಯನ್ ಶಬ್ದಗಳು. ಹೀಗೆಯೇ ಮುಂದುವರಿಯುತ್ತದೆ. ನಾವು ಮಾಡುವ **ಅರ್ಜಿ** ಅರೇಬಿಕ್ ಶಬ್ದ **ಕಚೇರಿ,** ಅಲ್ಲಿರುವ **ಅಮಲದಾರ, ಕಾರಕೂನ, ಗುಮಾಸ್ತ,** ಅವರು ಕೂಡುವ **ಖುರ್ಚಿ, ಮೇಜು, ಚಪರಾಸಿ ದಫ್ತರ್, ದರಬಾರ, ದಸ್ತಾವೇಜು, ನೋಂದ, ನೋಂದಣಿ, ದಾಖಲೆ. ನಕಲು, ನೌಕರ, ಬಕ್ಷೀಸು,** ಎಲ್ಲವೂ ಪರ್ಶಿಯನ್ ಶಬ್ದಗಳೇ. ಅವರು ಬರೆಯುವ **ಕಿರ್ದಿ, ಜಮಾ, ಖರ್ಚು, ತಪಶೀಲು,** ಅರೇಬಿಕ್, ಪರ್ಶಿಯನ್ ಶಬ್ದಗಳು. ಹಾಗೆ ಪೋಲೀಸ ಕಚೇರಿಗೆ ಹೋದರೆ, **ಫಿರ್ಯಾದಿ, ಕಾರಭಾರಿ, ಪಿತೂರಿ, ಫೌಜದಾರ,** ಇತ್ಯಾದಿ ಶಬ್ದಗಳೂ ಕನ್ನಡದ್ದಲ್ಲ. **ತರಬೇತಿ** ಅರೇಬಿಕ್ ಶಬ್ದ. ಇನ್ನು ಆಡಳಿತಾತ್ಮಕವಾಗಿ

ಉಪಯೋಗಿಸುವ, ಜಿಲ್ಲೆ, ತಾಲೂಕು, ಪರಗಣಾ, ಮೌಜೆ, ಸಾಕೀನ, ಇತ್ಯಾದಿಗಳು ಕನ್ನಡದ್ದಲ್ಲ. ಪ್ರತಿಯೊಂದಕ್ಕೂ ಎತ್ತುವ ಚಂದಾ ಶಬ್ದ ಪರ್ಶಿಯನ್ ಶಬ್ದ. ಕೈದಿ, ಕೈದು, ಕೈಫಿಯತ್ ಅರೇಬಿಕ್ ಶಬ್ದಗಳು. ನಾವು ಸಾಮಾನ್ಯವಾಗಿ ಬಳಸುವ ಜನ-ಜಾನುವಾರು ಗಳಲ್ಲಿಯ ಜಾನುವಾರು ಪರ್ಶಿಯನ್ ಶಬ್ದ! ಮಾಮೂಲು ಕೊಡುವುದು ಸಾಮಾನ್ಯ. ಈ ಮಾಮೂಲು ಸಹಿತವಾಗಿ, ಮಾಲಕ, ಮುತಾಲಿಕ, ಮುದ್ದಾಮ, ಮೇಜವಾನಿ, ಮೋಘಮ್, ಮೋಜು, ರಕಮು, ರೈತ ಇವೆಲ್ಲವುಗಳು ಅರೇಬಿಕ್ ಶಬ್ದಗಳು. ಇನ್ನು, ರಸ್ತೆ, ರಹದಾರಿ, ಮೈದಾನ, ಮೋಹರ, ಯಾದೀ, ರಾಜೀನಾಮಾ, ಆಮದು, ರಫ್ತು, ಲಗಾಮು, ಲಂಗಾ, ಲುಂಗಿ, ಲಂಗೋಟಿ ಶಾಲು, ಶಿಸ್ತು, ಶಿಫಾರಸು, ಶಿಲ್ಲಕ, ಸರಾಸರಿ, ಸಾದಾ, ಸಾಮಾನು, ಹುಶಾರ್, ವಾಹವಾ, ಶಾಭಾಶ್ ಹುರಮುಂಜಿ ಇತ್ಯಾದಿಗಳೆಲ್ಲ ಪರ್ಶಿಯನ್ ಶಬ್ದಗಳು. ಬೇರೀಜು ಪರ್ಶಿಯನ್ ಶಬ್ದ, ವಜಾ ಅರೇಬಿಕ ಶಬ್ದ. ಜೊತೆಗೆ ವಕಾಲತ್, ವಕೀಲಿ, ವಗೈರೆ, ವಶೀಲಿ, ವಾಯದಾ, ಸಹಿ, ಸಲ್ಲಾ, ಸಲಹೆ, ಸಾದಿಲವಾರ, ಹಕ್ಕು, ಹಮ್ಮಿಣಿ, ಹರಕತ್ ಹಜಿರ್, ಹುಕುಮ್, ಹುಕ್ಕಾ, ಹುದ್ದಾ-ಹುದ್ದೆ, ಹಾಸಲು, ಹದ್ದು, ಸರಹದ್ದು, ಹವಾ, ಹವಾಲ್ತಿ, ಹವ್ಯಾಸ/ಹವ್ಯಾಸಿ ಅರೇಬಿಕ್ ಶಬ್ದಗಳು.

ಮಗು ಹುಟ್ಟಿದ ಮೇಲೆ ಮೊದಲು ಮಾತನಾಡುವುದು 'ಅಮ್ಮ' ಅನಂತರ ಅಮ್ಮ ಮಗುವಿಗೆ ನೀರು ಕುಡಿಯಲು ಹೇಳುವುದು 'ಆಬು', ಈ ಆಬು ಶಬ್ದ ಬಂದದ್ದು ಪರ್ಶಿಯನ್ 'ಆಬ್' ಆಬ್ ಎಂದರೆ ನೀರು. ಬಹುಶಃ ಭಾರತದಾದ್ಯಂತ ಮಗುವಿಗೆ ನೀರು ಕುಡಿಸುವುದು ಈ ಆಬು ಶಬ್ದದಿಂದಲೇ. ಹೀಗೆ ಬದುಕಿನ ಪ್ರಾರಂಭದಿಂದಲೇ ಪರ್ಸಿಯನ್ ಭಾರತೀಯರ ಭಾಷೆಗಳಲ್ಲಿ ಹಾಸು ಹೊಕ್ಕಾಗಿದೆ.

ವಸ್ತುಗಳಲ್ಲಿ, ಅತ್ತರ, ಅತ್ತರದಾಣಿ, ಅಲವಾನ ಬಟ್ಟೆ, ಅಜವಾನ, ಕಾಗದ, ಕಂದೀಲು, ತಬಲಾ, ಲೋಬಾನ, ತಾಯಿತ, ನವಸಾಗರ, ಮನೂಕ, ಡಪ್ಪು ಅರೇಬಿಕ್ ಶಬ್ದಗಳಾದರೆ, ಅಗರಬತ್ತಿ, ಖೀರ, ತರಕಾರಿ, ಬರಫ-ಬರ್ಫ, ಬಾಜಾರ, ದುರ್ಬೀನು, ನಗಾರಿ, ಬದಾಮ, ಮೈದಾ, ಮೋಸಂಬಿ, ಮತಾಪು, ಮಾಲದಿ, ಶಹನಾಯಿ, ಶಂಕರಪೋಳೆ ಇತ್ಯಾದಿಗಳು ಪರ್ಶಿಯನ್ ಶಬ್ದಗಳು.

ದಿನಬಳಕೆಯಲ್ಲಿ ಸುಲಭವಾಗಿ ಬಳಸುವ ಅಜಾರಿ, ಅಬ್ರು, ಗಜಮು, ಐಲೀಕಡೆಗೆ, ಅಜಮಾಸ, ಅಂದಾಜ, ಆಹೇರ್, ಕಸರಾಟ, ಕಸೂತಿ, ಕಾರೇಗಾರ, ಕಿಸೆ, ಜೇಬು, ಕುತನಿ, ಕುಶಾಲು, ಖರೀದಿ, ಖಾನಾವಳಿ, ಖಾಕಿ, ಗಲ್ಲಾ, ಗಿಲಾಯಿ, ಚಮಚ, ಚಮಚಾಗಿರಿ, ಚಾಲಾಕ, ಮಲಮ್, ಮಸ್ಕಾ, ಇತ್ಯಾದಿಗಳೆಲ್ಲ ಪರ್ಶಿಯನ್ ಶಬ್ದಗಳು. ಅಲಗರ್ಜ, ಕಾಯಿಲೆ, ಡೌಲು, ಲಕ್ವಾ, ಅಕ್ಕಲು, ಆಸಾಮಿ, ಅದಲುಬದಲು, ಇನಾಮ, ಇಮಾರತ, ಇಲಾಜ್, ಇಸವೀ, ಕರಾರು, ಕಾಯದೆ, ಕುಲಾವಿ, ಕೋಮು, ಖಜೀಲ್, ಖಾತ್ರಿ, ಮಜಕೂರ, ಮುದ್ದತ, ಮರ್ಜೀ, ಮನ್ನಾ, ಇವುಗಳೆಲ್ಲ ಅರೇಬಿಕ್ ಶಬ್ದಗಳು.

ಈ ಮತ್ತು ಇನ್ನೂ ಅನೇಕ ಶಬ್ದಗಳು ಕನ್ನಡದಲ್ಲಿ ಸೇರಿ ಕನ್ನಡ ಶಬ್ದಗಳೇ ಆಗಿವೆ. ಇನ್ನೂ ಹಲವಾರು ಶಬ್ದಗಳು ಇರಬಹುದು. ಅಥವಾ ಇಲ್ಲಿಯ ಹಲವು ಶಬ್ದಗಳಿಗೆ ಬೇರೆ ಮೂಲವೂ ಇರಬಹುದು. ಆದರೆ ಇವುಗಳು ಕನ್ನಡ ಶಬ್ದಗಳು ಮಾತ್ರ ಇರಲಾರವು. ಈ ಶಬ್ದಗಳನ್ನು ಸಂಗ್ರಹಿಸುವಾಗ ನಂತರ ಈ ಹಿಂದೆ ಪ್ರಕಟವಾದ ಅನೇಕ ಪರ್ಶಿಯನ್, ಉರ್ದು, ಇಂಗ್ಲೀಷ್ ಮತ್ತು ಕನ್ನಡ ಶಬ್ದಕೋಶಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಅವುಗಳ ಪಟ್ಟಿಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ. ಅವುಗಳ ಸಂಪಾದಕರಿಗೆ ಕೃತಜ್ಞತೆಗಳು.

ವಿಶೇಷವಾಗಿ ಈ ಶಬ್ದಗಳನ್ನು ಒರೆಗೆ ಹಚ್ಚುವ ಕಾರ್ಯದಲ್ಲಿ ನನ್ನ ಆತ್ಮೀಯರಾದ, ಪರ್ಶಿಯನ್, ಅರೇಬಿಕ್ ವಿದ್ವಾಂಸ ಮೌಲಾನಾ. ಮಹಬೂಬುರ್ ರಹಮಾನ ಮದನಿ ಅವರು ತುಂಬ ಸಹಾಯ ಮಾಡಿದ್ದಾರೆ. ದಿನಗಟ್ಟಲೆ ಕುಳಿತು ಚರ್ಚಿಸಿದ್ದೇವೆ. ಹಲವಾರು ಸಲ ಈ ಶಬ್ದಗಳ ಮೂಲವನ್ನೂ ತದಕಿದ್ದಾರೆ. ವಿಸ್ತಾರ ಭಯದಿಂದ ಅದನ್ನೆಲ್ಲ ಇಲ್ಲಿ ನಮೂದಿಸಿಲ್ಲ. ಅವರಿಗೆ ನನ್ನ ಕೃತಜ್ಞತೆಗಳು.

ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆಯ ನಿರ್ದೇಶನ ಕಾರ್ಯ ಹೊಸ ಅನುಭವ. ನಾಲ್ಕು ವರುಷಗಳ ಹಿಂದೆ ಕರ್ನಾಟಕ ಸರಕಾರವು ಅನುದಾನ ನೀಡಲು ಒಪ್ಪಿ ೧೮ ಸಂಪುಟಗಳ ಪ್ರಕಟನೆಯ ಈ ಯೋಜನೆಯ ಕಾರ್ಯವನ್ನು ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರಕ್ಕೆ ಒಪ್ಪಿಸಿತು. ಯೋಜನೆಯ ಅಧ್ಯಕ್ಷರಾಗಿದ್ದ ಡಾ. ಎಂ.ಎಂ. ಕಲಬುರ್ಗಿ ಅವರು ನನ್ನ ಮೇಲೆ ವಿಶ್ವಾಸವಿಟ್ಟು ಯೋಜನೆಯ ನಿರ್ದೇಶನ ಪಟ್ಟವನ್ನು ಕಟ್ಟಿದಾಗ ಅನುವಾದಿಸಲು ಒಂದು ಹಸ್ತಪ್ರತಿಯೂ ಇರಲಿಲ್ಲ. ನಾಡಿನಾದ್ಯಂತ ತಿರುಗಾಡಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ಹುಡುಕಿದಾಗ ಅಗಾಧವಾದ ಸಾಹಿತ್ಯ ದೊರಕಿತು. ಅದಕ್ಕೆಲ್ಲ ಕಾರಣ ನನ್ನ ಬೆನ್ನ ಹಿಂದೆ ಇದ್ದ ಡಾ. ಕಲಬುರ್ಗಿ ಅವರ ಶಕ್ತಿಯೇ ಕಾರಣ. ಪ್ರತಿ ಹೆಜ್ಜೆಯಲ್ಲಿ ದೊರೆತ ಅವರ ಸಲಹೆಯನ್ನು ಮರೆಯುವಂತೆ ಇಲ್ಲ. ಮಧ್ಯದಲ್ಲಿಯೇ ನಮ್ಮನ್ನು ಅಗಲಿ ಹೋದದ್ದು ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಬಹು ದೊಡ್ಡ ಆಘಾತ. ಯೋಜನೆ ನಿಲ್ಲಲಿಲ್ಲ ಅದಕ್ಕೆ ಕಾರಣ, ಯೋಜನೆಯ ಸದಸ್ಯರು ಮತ್ತು ಸಂಶೋಧನ ಕೇಂದ್ರದ ಅಧ್ಯಕ್ಷ ಶ್ರೀ ಶಿವಯೋಗಿ ತಂಬಾಕೆ ಮತ್ತು ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರುಗಳ ನಿರಂತರ ಸಹಕಾರದಿಂದ ೧೮ ಸಂಪುಟಗಳನ್ನು ಪ್ರಕಟಿಸುವಂತಾಯಿತು. ಅವರಿಗೆ ನನ್ನ ಕೃತಜ್ಞತೆಗಳು.

ಇದಕ್ಕೆಲ್ಲ ಮೂಲ ಕಾರಣ, ಇನ್ನೊಬ್ಬರು ಅವರ ಹೆಸರನ್ನು ಹೇಳದಿದ್ದರೆ ಅಪಚಾರವಾದೀತು. ಈ ಯೋಜನೆಯ ಹೊಳವನ್ನು ಹಾಕಿದವರು, ನಾಡಿನ ಸುಸಂಸ್ಕೃತ ರಾಜಕಾರಣಿ, ಶಿಕ್ಷಣ ತಜ್ಞ, ಡಾ. ಎಂ. ಬಿ. ಪಾಟೀಲ, ಅಧ್ಯಕ್ಷರು, ಬಿ.ಎಲ್.ಡಿ.ಇ. ಸಂಸ್ಥೆ ವಿಜಯಪುರ, ಮತ್ತು ಜಲಸಂಪನ್ಮೂಲ ಸಚಿವರು ಕರ್ನಾಟಕ ಸರಕಾರ.

ತಮ್ಮ ಅವಿರತ ಕಾರ್ಯದಲ್ಲೂ ಅವರಿಗೆ ತಮ್ಮ ಶಿಕ್ಷಣ ಸಂಸ್ಥೆ ಮತ್ತು ಇಡೀ ನಾಡಿನ ನೀರಾವರಿ ಯೋಜನೆಗಳಲ್ಲಿ ಇದ್ದಷ್ಟೇ ಆಸಕ್ತಿಯನ್ನು ಈ ಯೋಜನೆಯಲ್ಲೂ ತೋರಿಸಿದರು. ನನೆನಪಾದಾಗಲೆಲ್ಲ, ನಡುರಾತ್ರಿ ಇದ್ದೀತು, ಪ್ರವಾಸದಲ್ಲಿದ್ದೀತು ದೂರವಾಣಿ ಸಂಪರ್ಕ ಮಾಡಿ, ವಿಶ್ವಾದ್ಯಂತ ಆದಿಲಶಾಹಿ ಸಾಹಿತ್ಯದ ಲಭ್ಯತೆಯನ್ನು ಚರ್ಚಿಸುತ್ತಿದ್ದರು. ಅಂತರ್ಜಾಲದಲ್ಲಿ ಹುಡುಕಾಡಿ ಸೂಚಿಸುತ್ತಿದ್ದರು. ಬಹುಮೂಲ್ಯದ ಅನೇಕ ಪುಸ್ತಕಗಳನ್ನು ಖರೀದಿಸಿ ಒದಗಿಸಿದರು. ಅವರ ಆಸಕ್ತಿ, ಆಸ್ಥೆ, ಕುತೂಹಲಕ್ಕೆ ಹಲವಾರು ಸಲ ನಿಬ್ಬೆರಗಾಗಿದ್ದೇನೆ. ಅವರಿಗೆ ನನ್ನ ಹೃದಯಪೂರ್ವಕ ವಂದನೆಗಳು.

ಇದರೊಂದಿಗೆ ಯೋಜನೆಯಲ್ಲಿ ಕಾಣಿಸಿದ ೧೮ ಸಂಪುಟಗಳು ಪ್ರಕಟವಾದುವು. ಆದರೆ ಆದಿಲಶಾಹಿ ಸಾಹಿತ್ಯದ ಸಂಪೂರ್ಣ ಅನುವಾದ ಆದಂತಾಗಲಿಲ್ಲ. ಸಂಗ್ರಹಿಸಿದ ಸಾಹಿತ್ಯದಲ್ಲಿ ಇನ್ನೂ ಸುಮಾರು ನಾಲ್ಕು ಸಾವಿರ ಪುಟಗಳಷ್ಟು ಸಾಹಿತ್ಯ ಅನುವಾದದ ದಾರಿ ಕಾಯುತ್ತಿವೆ. ಹುಡುಕಿದರೆ ಇನ್ನೂ ಹಲವಾರು ಸಾವಿರ ಪುಟಗಳ ಸಾಹಿತ್ಯ ದೊರೆಯುವ ಸಾಧ್ಯತೆಯೂ ಇದೆ. ಅದನ್ನು ಎರಡನೆಯ ಹಂತದಲ್ಲಿ ಮುಂದುವರಿಸಿಕೊಂಡು ಹೋಗಲು ಯೋಚಿಸಿದೆ.

ಕಳೆದ ನಾಲ್ಕು ವರುಷಗಳಿಂದ ನನ್ನ ಒತ್ತಡಗಳನ್ನು ಸಹಿಸಿ ಸಹಕರಿಸಿದ, ಯೋಜನೆಯ ಲೆಕ್ಕಪತ್ರ, ಅನುವಾದಕರೊಂದಿಗೆ ಸತತ ಸಂಪರ್ಕ ಮತ್ತೆಲ್ಲ ಕಾರ್ಯಗಳನ್ನು ಚೊಕ್ಕಟವಾಗಿ ಮಾಡಿದ ಶ್ರೀ ಎಂ.ಬಿ. ಪಾಟೀಲ [ಸಂಜೂ], ಡಿಟಿಪಿ ಸಹಾಯಕರಾದ ಶ್ರೀಮತಿ ಶ್ವೇತಾ ರಾಯಚೂರಕುಲಕರ್ಣಿ, ವಿಜಯಲಕ್ಷ್ಮೀ ಮತ್ತು ಹಸ್ತಪ್ರತಿಗಳನ್ನು ಓರಣವಾಗಿಟ್ಟ ಶ್ರೀ ದೊಡ್ಡಮನಿ ಇವರನ್ನೂ ಮರೆಯುವಂತಿಲ್ಲ. ಅವರಿಗೆ ನನ್ನ ಕೃತಜ್ಞತೆಗಳು.

೧೮ ಸಂಪುಟಗಳನ್ನು ಅಂದವಾಗಿ ಮುದ್ರಿಸಿದ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ [ಹೆಬ್ಬಾಳ] ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇನೆ. ಅವುಗಳಿಗೆ ಆಪ್ತವಾಗುವಂಥ ಕಾಳಿಯವರನ್ನೂ ಇಲ್ಲಿ ನೆನೆಯದೆ ಇರಲಾರೆ.

■

*

ಆಕರ ಶಬ್ದಕೋಶಗಳು

1. Glossary of Judicial and Revenue Terms of British India by H H Wilson, London 1855

2. Kisamwar Glossary by Ullal Narsing Rao, 1891

3. Mysore Gazetteer ed by C Hayavadan Rao Vol IV Administrative 1929

4. Administration of Deccan under Nizam-Ul-Mulk (?)

5. Secret Correspondence of Tipu SultAn

6. Foreign Loan Words in Kannada (Arebik & Persian) by Dr A Shankar Kedilaya, University of Madras 1970

7. ಮರಾಠಿ–ಕನ್ನಡ ಶಬ್ದ ಕೋಶ – ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಸಂಸ್ಕೃತಿ ಮಂಡಲ ಮುಂಬಯಿ

8. ಕಛೇರಿ ಕೈಪಿಡಿ – ಕರ್ನಾಟಕ ಸರಕಾರ

9. ಎರವಲು ಪದಕೋಶ – ಪ್ರೊ ಜಿ ವೆಂಕಟಸುಬ್ಬಯ್ಯ ೧೯೯೮

10. ಪದಾರ್ಥ ಚಿಂತಾಮಣಿ – ಪಾ ವೆಂ ಆಚಾರ್ಯ (೨ನೆಯ ಮುದ್ರಣ ೧೯೯೮)

11. ಉರ್ದು ಕನ್ನಡ ನಿಘಂಟು – ಕರ್ನಾಟಕ ಉರ್ದು ಅಕಾಡೆಮಿ

12. ಕಸ್ತೂರಿ ಕೋಶ – ಪಂಡಿತ ಕವಲಿ (೧೦ನೆಯ ಮುದ್ರಣ ೨೦೦೩)

13. ಹಿಂದಿ ಕನ್ನಡ ಶಬ್ದ ಕೋಶ – ಗುರುನಾಥ ಜೋಶಿ (ಪುನರ್ ಮುದ್ರಣ ೨೦೦೮)

*

ಕನ್ನಡದಲ್ಲಿ ದಿನಬಳಕೆಯಲ್ಲಿರುವ ಅರೇಬಿಕ್- ಪರ್ಶಿಯನ್ ಶಬ್ದಗಳು

*

ಅ

ಅಇಲ (ಫಾ)	–	ಐಲೀಕಡೆ, ಇತ್ತೀಚಿಗೆ
ಅಇಂದ (ಫಾ)	–	ಆಯಿಂದಾ, ಬರುವ ಕಾಲ
ಅಈನ (ಫಾ)	–	ಐನ್, ಒಳ್ಳೆಯ ನಡತೆ, ವಿಧಾನ
ಅಈಬದಾರ (ಫಾ)	–	ಐಬದಾರ, ದೋಷಯುಕ್ತ
ಅಈಬ (ಫಾ) ಐಬ್	–	ದೋಷ
ಅಕದಸ (ಅರ)	–	ಪವಿತ್ರ
ಅಕಬರ (ಅರ)	–	ಬಹುದೊಡ್ಡ ಘನವಂತ
ಅಕರಮ (ಅರ)	–	ಬಹು ದಯಾವಂತ
ಅಕಲಾ (ಫಾ)	–	ಕುದುರೆಯ ಒಂದು ರೋಗ
ಅಕಲಮಂದ (ಫಾ)	–	ಜಾಣ, ಬುದ್ಧಿವಂತ
ಅಕಾರಬಂದ (ಫಾ)	–	ಸರ್ವೆ ನಂಬರ ಸಹಿತ ಹಳ್ಳಿಯ ವಿಸ್ತೃತ ರಿಜಿಸ್ಟರ್
ಅಕೀಕ (ಅರ)	–	ಒಂದು ರತ್ನ
ಅಕ್ಕಡ (ಫಾ)	–	ಡೌಲು–ಧಿಮಾಕು, ಒಯ್ಯಾರ, ಒನಪು
ಅಕ್ಕಲ (ಅರ)	–	ಬುದ್ಧಿ, ತಿಳುವಳಿಕೆ
ಅಖತ್ಯಾರ (ಅರ)	–	ಇಖ್ತಿಯಾರ್ –ಅಧಿಕಾರ
ಅಖತ್ಯಾರೀ (ಅರ)	–	ಅಧಿಕಾರಿ
ಅಖಬಾರ (ಅರ)	–	ವರ್ತಮಾನ ಪತ್ರ
ಅಖರ (ಅರ)	–	ಮಧ್ಯಾಹ್ನದಲ್ಲಿ ದನಗಳು ವಿಶ್ರಮಿಸುವ ಸ್ಥಾನ
ಅಖೇರ (ಫಾ)	–	ಕೊನೆ

ಅಖೇರಿ (ಫಾ) – ಕೊನೆಯ

ಅಗರ (ಫಾ) – ಅಥವಾ

ಅಗರಬತ್ತೀ (ಫಾ) – ಊದಿನಕಡ್ಡಿ

ಅಫವಾ (ಫಾ) – ವದಂತಿ, ಕೇಳುಮಾತು, ಹಾರಿಕೆ ಸುದ್ದಿ

ಅಚಾನಕ್ (ಫಾ) – ಅಕಸ್ಮಾತ್ತಾಗಿ

ಅಚಾರ್ (ಫಾ) – ಉಪ್ಪಿನಕಾಯಿ

ಅಜಜ (ಫಾ) – ಕುದುರೆಯ ರೋಗ

ಅಜತರ್ಫ (ಫಾ) – ಕಡೆಯಿಂದ

ಅಜನಬಿ (ಫಾ) – ಅಪರಿಚಿತ

ಅಜಬ (ಅರ) – ಆಶ್ಚರ್ಯಕಾರಕ, ಅತಿ ವಿಚಿತ್ರ

ಅಜಬಾಈ (ಅರ) – ಆಶ್ಚರ್ಯ, ಸೋಜಿಗ

ಅಜಬಾಎಸ (ಅರ) – ಮೂಲಕ ಕಾರಣದಿಂದ

ಅಜಬುನಾದಿ (ಫಾ) – ಬುನಾದಿಕಾಲದ, ಪ್ರಾಚೀನ

ಅಜಮ (ಅರ) – ಮಹಾ, ದೊಡ್ಡ, ಘನವಂತ

ಅಜಮತ (ಅರ) – ದೊಡ್ಡತನ

ಅಜಮಾವ (ಫಾ) – ಪರೀಕ್ಷೆ, ಪ್ರಯೋಗ, ಲೆಕ್ಕ

ಅಜಮಾಸ (ಫಾ) – ತರ್ಕ, ಲೆಕ್ಕ ಅಂದಾಜು,ಸುಮಾರು ಹೆಚ್ಚು ಕಡಿಮೆ

ಅಜಮಾಯಿಶಿ (ಫಾ) – ಟೆಸ್ಟ್, ಪ್ರಯೋಗ, ಪರಿಷ್ಕರಣೆ, ತಾಳೆನೋಡು, ಪರಿಶೀಲಿಸು

ಅಜಮಾಯಿಶ್ ತರೀಕ (ಫಾ) – ಪ್ರಾಯೋಗಿಕ

ಅಜರಾಹ (ಫಾ) – ಬಗೆಯಿಂದ ಪ್ರಕಾರವಾಗಿ

ಅಜವಾನ (ಫಾ) – ಅಜವಾನ, ಓಮ ಕಾಳು

ಅಜಾನ್ (ಅರ) – ಮಸೂತಿಯಲ್ಲಿಂದ ಪ್ರಾರ್ಥನೆಗೆ ಕರೆ

ಅಜಾರ್ (ಫಾ) – ಬೇನೆ

ಅಜಾರಿ (ಫಾ) – ಬೇನೆ ಬಿದ್ದವ, ಕಾಯಿಲೆಯಾದವ

ಅಜೀಜಿ (ಅರ) – ದೀನತೆ, ದೈನ್ಯ, ಅಂಗಲಾಚಿ ಬೇಡಿಕೊಳ್ಳುವಿಕೆ

ಅಜೀಮ (ಅರ) – ದೊಡ್ಡ, ಘನವಂತ

ಅಜುರದಾ- ಅಜುರ್ದಾ(ಫಾ)	–	ಮ್ಲಾನ, ಉದಾಸೀನ, ದುಃಖಿತ
ಅರ್ಜ (ಅರ)	–	ಅರ್ಜಿ ಬಿನ್ನಹ, ಅಗಲಳತೆ
ಅರ್ಜೀ (ಅರ)	–	ಅರ್ಜಿ, Application
ಅರ್ಜಿದಾರ (ಅರ)	–	ಅರ್ಜಿ ಮಾಡುವವ
ಅರ್ಜಿದಾಸ್ತ (ಅರ)	–	ಅರ್ಜಿ
ಅತಲಸ್ (ಅರ)	–	ಸಾಟೀನ್, ರೇಷ್ಮೆ ಬಟ್ಟೆ
ಅತಾರ (ಅರ)	–	ಸುಗಂಧ, ಬಣ್ಣದ ಕಾಗದ ಮಾರುವವ (ಅತ್ತಾರ)
ಅತ್ತರ್ (ಅರ)	–	ಸುವಾಸನೆ ಎಣ್ಣೆ, ಸತ್ವ, ಅರ್ಕ
ಅತ್ತರದಾಣೀ (ಅರ)	–	ಅತ್ತರು ಹಾಕುವ ಚಿಕ್ಕ ಕುಪ್ಪಿ(ಬೆಳ್ಳಿಯದು)
ಅತ್ತಾರ (ಅರ)	–	ಅತ್ತರು ಮಾರುವವ, ತಯಾರಿಸುವವ
ಅತ್ತಾರೀ (ಅರ)	–	ಅತ್ತರು, ಸುಗಂಧ ದ್ರವ್ಯ, ಯುನಾನಿ ಔಷಧ ಮಾರುವವ
ಅದಬ (ಫಾ)	–	ಸನ್ಮಾನ, ಮರ್ಯಾದೆ
ಅದಲ ಬದಲ (ಅರ)	–	ಅದಲ ಬದಲು, ಒಂದಕ್ಕೆ ಪ್ರತಿಯಾಗಿ ಇನ್ನೊಂದು
ಅದನಾ (ಅರ)	–	ತುಚ್ಛ, ಕ್ಷುದ್ರ
ಅದಮಾಸ (ಫಾ)	–	ಅಜಮಾಸ, ಅಂದಾಜು ಲೆಕ್ಕ
ಅದಾ (ಫಾ)	–	ಒನಪು, ಒಯ್ಯಾರ, ಸಡಗರ, ಜಂಭ, ಬಂಡವಾಳ
ಅದಾಈ (ಫಾ)	–	ಕೊಡುವಿಕೆ, ಸಾಲಮುಟ್ಟಿಸುವಿಕೆ, ಉತ್ಪನ್ನ
ಅದಾಲತ್ (ಅರ)	–	ನ್ಯಾಯಾಲಯ, ಕೋರ್ಟು, ನ್ಯಾಯಾಲಯ
ಅದಾವತ್ (ಅರ)	–	ಶತ್ರುತ್ವ, ಹಗೆತನ
ಅದಾವತ್ಯಾ (ಅರ)	–	ಕೋರ್ಟು ಕಚೇರಿಗಳಲ್ಲಿ ವ್ಯಾಜ್ಯ ಹೂಡುವವ
ಅದ್ದಲ್ (ಅರ)	–	ನ್ಯಾಯೋಚಿತ ಕ್ರಮ
ಅನಮೋಲ (ಫಾ)	–	ಬೆಲೆಬಾಳುವ ವಸ್ತು

ಅನಾಮತ್ (ಫಾ)	–	ಅಮಾನತ್, ಠೇವಣಿ
ಅನಾಡೀ (ಫಾ)	–	ಕೆಲಸಕ್ಕೆ ಬಾರದವ
ಅನಾನಸ್(ಅರ)	–	ಅನಾನಸ್ ಹಣ್ಣು
ಅನಾರ (ಫಾ)	–	ದಾಳಿಂಬ ಹಣ್ಣು, ಮದ್ದು ಗುಂಡು, ಗರ್‌ನಲ್
ಅಫರಾತಫರಾ (ಫಾ)	–	ಹಣಕಾಸಿನ ದುರ್ವ್ಯವಹಾರ, ಅಪಹಾರ
ಅಫಲಾತೂನ (ಅರ)	–	ವಿದ್ವಾಂಸ, ಪ್ಲುಟೋ
ಅಫೀಮ (ಫಾ)	–	ಅಫು, ಅಫೀಮು, ಒಂದು ಮಾದಕ ವಸ್ತು
ಅಫೂ (ಫಾ)	–	ಅಫು, ಅಫೀಮು
ಅಬಕಾರೀ (ಫಾ)	–	ಮಾದಕ ವಸ್ತುಗಳ ಮೇಲಿನ ಕರ
ಅಬದಗೀರ (ಫಾ), ಅಬ್ದಾಗೀರ ಕೊಡೆ, ಆತ ಪತ್ರ	–	ಛತ್ರ, ಸರದಾರರ ತಲೆ ಮಳೆ ಹಿಡಿಯುವ
ಅಬರಖ (ಫಾ)	–	ಅಭ್ರಕ
ಅಬಲಖ (ಅರ)	–	ಪಂಚಕಲ್ಯಾಣ ಕುದುರೆ
ಅಬಲಾ (ಫಾ)	–	ಅಬಲೆ, ಕೋಮಲಾಂಗಿ
ಅರ್ಬಖಾನಾ	–	ವಸ್ತು ಸಂಗ್ರಹಾಲಯ
ಅಬಾದ (ಫಾ)	–	ಸುಖ–ಸಮೃದ್ಧಿ, ಸುಭಿಕ್ಷ
ಅಬಾದೀ (ಫಾ)	–	ಸುಖ–ಸಮೃದ್ಧಿ, ಸುಭಿಕ್ಷ
ಅಬಾಶಾಈ (ಫಾ)	–	ತಿಳಿಗೆಂಪು, ರಾಜವಸ್ತ್ರ
ಅಬ್ದ(ಫಾ)	–	ಸಂಶಯ, ಅನಿಶ್ಚಯ
ಅಬ್ಬಾ (ಅರ)	–	ತಂದೆ
ಅಬ್ದಾಗಿರಿ(ಫಾ)	–	ದೇವರು/ರಾಜರ ಮೆರವಣಿಗೆಯಲ್ಲಿ ಹಿಡಿಯುವ ಒಂದು ಬಗೆಯ ಛತ್ರಿಯಾಕಾರದ ಸಾಧನ(ಅಪ್ತಾಬ್–ಸೂರ್ಯ ಗಿರಫ್ತನ್–ಹಿಡಿಯುವುದು)
ಅಬ್ರೂ (ಫಾ)	–	ಮರ್ಯಾದೆ, ಮಾನ
ಅಬ್ರೂದಾರ (ಫಾ)	–	ಮರ್ಯಾದಸ್ಥ, ಮಾನವಂತ

ಅಬ್ರೂಪತ್ರ (ಫಾ)	–	ಒಳ್ಳೆಯ ನಡತೆಯ ಶಿಫಾರಸು
ಅಬೋಲಿ (ಫಾ)	–	ಕಿತ್ತಳೆ ಬಣ್ಣದ, ಹೂವು
ಅಮದಾನೀ (ಫಾ)	–	ಆಳಿಕೆಯ ಕಾಲ, ರಾಜವಂಶದ ಕಾಲ, ಆಳುವಿಕೆ
ಅಮಲ (ಅರ)	–	ಶಾಸನ, ಅಧಿಕಾರ ಸ್ವಾಮಿತ್ವ, ಅಮಲು
ಅಮಲ ಗುಜಾರ (ಫಾ)	–	ಅಧಿಕಾರಿ
ಅಮಲದಾರ (ಫಾ)	–	ಅಧಿಕಾರಿ, ಕಂದಾಯ ಸಂಗ್ರಹ/ ತಾಲೂಕಾ ಅಧಿಕಾರಿ
ಅಮಲಜರೀ (ಫಾ)	–	ಡಿಕ್ರೀ ಅಮಲು ಮಾಡುವಿಕೆ, Execu tion of de…
ಅಮಲಾ (ಫಾ)	–	ಕಿವಿಯಲ್ಲಿಯ ಬಾವಲಿ
ಅಮಲೀ (ಅರ)	–	ಅಮಲೇರಿಸುವ, ಮೈನವಿರೇಳಿಸುವ
ಅಮವಾಲ್, ಅಮವಾಲು(ಅರ)	–	ಬೇವಾರಸಾ ಆಸ್ತಿ, ಸರಕಾರಕ್ಕೆ ಸೇರುವ ಆಸ್ತಿ
ಅಮಾನತ (ಅರ)	–	ಇಟ್ಟ, ಒಪ್ಪಿಸಿದ ಸೊತ್ತು, ಠೇವಣಿ, ಠೇವಣಾತಿ
ಅಮಾನೀ (ಅರ)	–	ಸ್ಥಾನಾಪನ್ನ, (ಬದಲಿ)ಅಧಿಕಾರಿ
ಅಮೀನ (ಅರ)	–	ಸಂರಕ್ಷಕ ಅಧಿಕಾರಿ, ಮೇಲ್ವಿಚಾರಕ
ಅಮೀನಉಲ್ ಮುಲ್ಕ್(ಅರ)	–	ರಾಜ್ಯದ ಧರ್ಮದರ್ಶಿ(ಒಂದು ಬಿರುದು)
ಅಮೀರ (ಅರ)	–	ಸರದಾರ, ಧನವಂತ, ಮುಖ್ಯಸ್ಥ
ಅಮೀರ, ಉಮರಾವ (ಅರ)	–	ಬಹುದೊಡ್ಡ ಸರದಾರ
ಅಯನಕ (ಅರ)	–	ಚಾಳೀಸು, ಉಪನೇತ್ರ, ಕನ್ನಡಕ
ಅಯಬ (ಅರ)	–	(ಐಬ) ದೋಷ, ನ್ಯೂನ, ವ್ಯಂಗ್ಯ
ಅಯಾಲು(ಫಾ)	–	ಸಿಂಹ/ಕುದುರೆ ಕುತ್ತಿಗೆಯ ಮೇಲೆ ಕಾಣಿಸಿದ ಕೂದಲು
ಅಯಿನಾ (ಅರ)	–	ಕನ್ನಡಿ
ಅರಕಸ (ಫಾ)	–	ಕರಗಸ, ಕೊರೆಯುವ ಸಾಧನ
ಅರಕ, ಅರಕು (ಅರ)	–	ಭಟ್ಟಿ ಇಳಿಸು, ಎರಕ ಹೊಯ್ಯು,

ಶುದ್ಧಗೊಳಿಸು, ಭಟ್ಟಿ ಸೆರೆ

ಅರಗಿಲ (ಫಾ)	–	ಕಂದೀಲು, ಲಾಟೀನು, ಕೈದೀಪ
ಅರಬ (ಫಾ)	–	ಒಂದು ಬಗೆಯ ದೊಡ್ಡ ಗಾಡಿ, ಬಂಡಿ, ಹಿಂದಿನಿಂದ
ಅರಬಾಣಾ (ಫಾ)	–	ಪ್ರಭುತ್ವ
ಅರಮಾನ (ಫಾ)	–	ಆಶೆ, ಆಕಾಂಕ್ಷೆ, ಇಚ್ಚೆ, ಮನೋರಥ
ಅರಮಾಯಿಷಿ–ಪರಮಾಯಿಷಿ(ಫಾ)	–	ಶ್ರೇಷ್ಠ, ಬೆಲೆಯುಳ್ಳ ವಸ್ತು
ಅರಬೀ (ಅರ)	–	ಅರಬಸ್ತಾನದ
ಅರಾಬಾ (ಫಾ)	–	ತೋಫು ಒಯ್ಯುವ ಬಂಡಿ, ಬಡಿವಾರ, ತೊಡಕು, ಬಿಕ್ಕಟ್ಟು
ಅರಾಸ (ಫಾ)	–	ಸುಂದರವಾದ ರಚನೆ, ಶೃಂಗಾರ
ಅರಿಮಣ (ಅರ)	–	ಪಾರಸೀ ದೇಶ ಅಥವಾ ಜನ (ಅಹ್ರಿಮಾನ್)
ಅರೀ (ಅರ)	–	ಸಮಗಾರನ ಉಪಕರಣ, ಗೆರೆ
ಅಲಕಾಬ (ಅರ)	–	ಉಪಾಧಿ, ಪದವಿ(ಪತ್ರ ವ್ಯವಹಾರದಲ್ಲಿ)
ಅಲಗಂಜೀ (ಅರ), ಅಲಗರ್ಜಿ	–	ಮಂದ, ಸೋಮಾರಿ, ಅನುತ್ಸಾಹಿ
ಅಲಫ (ಅರ)	–	ಒಂದು ಸಾವಿರ
ಅಲಬತ್ತಾ (ಫಾ)	–	ಖಂಡಿತವಾಗಿ, ಖಾತ್ರಿಯಾಗಿ, ನಿಶ್ಚಿತವಾಗಿ
ಅಲಬೇಲಾ (ಫಾ)	–	ಅಲಭ್ಯ, ಸುಂದರ
ಅಲಬೇಲಿ (ಫಾ)	–	ಸುಂದರಿ, ವಿಲಾಸಿನಿ
ಅಲಮ (ಅರ)	–	ಜಗತ್ತು
ಅಲಮ್‌ಪನ್ಹಾ (ಫಾ)	–	ಬಾದಶಹ, ಅರಸ್
ಅಲಮಾರೀ(ಪೋರ್ಚು)	–	ಕಪಾಟು, ಅಲ್ಮಾರು, ಬೀಗ
ಅಲವಾನ್ (ಅರ)	–	ಅಲವಾನ್ ಬಟ್ಟೆ, ಕೆಂಪು ಬಟ್ಟೆ
ಅಲ್‌ಜಿಬ್ರಾ (ಅರ)	–	ಬೀಜಗಣಿತ
ಅಲ್‌ಹಕ್ (ಅರ)	–	ಪರಮಸತ್ಯ
ಅಲಾ (ಅರ)	–	ವೈಭವ ಮೇಲ್ಮೈ

ಅಲಾಈಬಲಾಈ (ಅರ)	–	ತೊಂದರೆ, ಕಷ್ಟ (ಅನವಲ ಪಡು)
ಅಲಾದಾ (ಅರ)	–	ಬೇರೆ, ಅಲಾಯಿದಾ
ಅಲಾಈ (ಅರ)	–	ದೊಡ್ಡ, ಘನವಂತ
ಅಲಾವತ (ಫಾ)	–	ಹೆಂಡತಿ
ಅಲಾವಾ (ಫಾ)	–	ಮೊಹರಮ್ ಹಬ್ಬದಲ್ಲಿಯ ಅಗ್ನಿಕುಂಡ, ಅಲಾಬ
ಅಲಾವೀ (ಫಾ)	–	ಭೂ ಸುಧಾರಣಾ ವೆಚ್ಚ(ಹಂತ ಹಂತವಾಗಿ)
ಅಲಾಹಿದಾ (ಅರ)	–	ಬೇರೆ
ಅಲಿಶಾನ (ಅರ)	–	ಸೊಬಗಿನ, ವೈಭವದ, ಶ್ರೇಷ್ಠ, ಭವ್ಯ
ಅಲೀಗೋಲ (ಫಾ)	–	ತೋಫಿನ, ಗುಂಡು ಹಾರಿಸುವ
ಅಲೀಜಾಹ (ಫಾ)	–	ಬಾದಶಹ, ದೊರೆ
ಅಲ್ಕಾಬ (ಅರ)	–	ಪದವಿ, ಅಭಿದಾನ, ಶಿಷ್ಟಾಚಾರದ ಸಂಬೋಧನೆ
ಅಲ್ವಿದಾ (ಅರ)	–	ಕೊನೆಯ ಪ್ರಣಾಮ, ಬೀಳ್ಕೊಡುಗೆ
ಅಲ್ಲಾಹ (ಅರ)	–	ದೇವರು
ಅವಕಾತ(ದ) (ಅರ)	–	ಶಕ್ತಿ, ನಿರ್ವಾಹ
ಅವಜಾರ (ಫಾ)	–	ಸಾಧನ, ಉಪಕರಣ
ಅವಲಾದ (ಅರ)	–	ಸಂತಾನ, ಸಂತತಿ
ಅವಲಿಯಾ (ಅರ)	–	ಸಾಧು
ಅವಸಾನೀ (ಅರ)	–	ಎಚ್ಚರವುಳ್ಳ, ಧೈರ್ಯಶಾಲಿ
ಅವ್ವಲ (ಫಾ)	–	ಪ್ರಥಮ
ಅವಾಜ್ (ಫಾ)	–	ಅವಾಜು, ಶಬ್ದ, ಸದ್ದು
ಅವಾಜವೀ (ಅರ)	–	ಅಯೋಗ್ಯ
ಅಶೀಲ (ಅರ)	–	ಪಕ್ಷಕಾರ
ಅಶ್ರಫ (ಅರ)	–	ಘನವಂತ
ಅಶ್ರಫೀ (ಫಾ)	–	ಹೊನ್ನು, ಸುವರ್ಣನಾಣ್ಯ
ಅಶ್ರಾಫ (ಅರ)	–	ಸಭ್ಯ

ಅಸದ (ಅರ)	–	ಸಿಂಹ
ಅಸದಖಾನ (ಅರ)	–	ಸಿಂಹದಂಥ ಸರದಾರ (ಒಂದು ಬಿರುದು)
ಅಸಬಾಬ (ಅರ)	–	ಸಾಮಾನು, ಒಡವೆ
ಅಸರ (ಅರ)	–	ಪರಿಣಾಮ
ಅಸಫ ದಫ್ತರ್(ಫಾ)	–	ಟಿಪ್ಪು ಸುಲ್ತಾನನ ಅರ್ಥ ಮತ್ತು ಕಂದಾಯ ಇಲಾಖೆ
ಅಸರ್ಫೀ (ಫಾ)	–	ಹೊನ್ನು, ಸುವರ್ಣ ನಾಣ್ಯ
ಅಸಲ್ (ಅರ)	–	ಮೂಲ, ಶುದ್ಧ, ಅಸಲು, ಮೂಲಧನ
ಅಸ್‌ಬಾಬ (ಅರ)	–	ಅಸಬಾಬು, ಆಸ್ತಿಪಾಸ್ತಿ, ಸಂಪತ್ತು
ಅಸಾನ (ಅರ) (ಏಹಸಾನ)	–	ಉಪಕಾರ
ಆಸಾಮೀ (ಅರ)	–	ವ್ಯಕ್ತಿ, ಮನುಷ್ಯ, ಆಳು
ಅಸ್ಕರಾ (ಫಾ)	–	ಕೀರ್ತಿ, ಖ್ಯಾತಿ
ಅಸ್ತನೀ (ಫಾ)	–	ತೋಳು
ಅಸ್ತರ (ಫಾ)	–	ಅಸ್ತರ, ಒಳಬಟ್ಟೆ
ಅಸ್ಮಾನೀ (ಫಾ)	–	ಆಕಾಶದ ದೈವ, ತಿಳಿನೀಲಿ ಬಣ್ಣ
ಅಹವಾಲ (ಅರ)	–	ವರದಿ, ವೃತ್ತಾಂತ
ಅಹಸಾನ (ಅರ)	–	ಉಪಕಾರ
ಅಹೇರ (ಫಾ)	–	ಉಡುಗೊರೆ, ಕಾಣಿಕೆ
ಅಹ್ಲೇಜಾಹೇರ್ (ಫಾ)	–	ಬಹಿರಂಗ
ಅಹ್ಲೆಬಾತಿನ್(ಫಾ)	–	ಅಂತರಂಗ

*

ಆ

ಆಇಂದಾ (ಫಾ)	–	ಇನ್ನುಮುಂದೆ, ಮುಂದಿನ ವರ್ಷ
ಆಖರೀ (ಫಾ)	–	ಕೊನೆಯ, ಅಂತಿಮ
ಆಖಿರಕರ್ (ಫಾ)	–	ಕೊನೆಗೂ
ಆಂಚಲ್ (ಫಾ)	–	ಸೆರಗು
ಆಜಕಲ್ (ಫಾ)	–	ಪ್ರಚಲಿತ, ಇಂದು– ನಾಳೆ
ಆಜಮಾಸಾ (ಅರ)	–	ಪರೀಕ್ಷಿಸು, ಪರಿಶೀಲಿಸು
ಆರ್ಜವ (ಫಾ)	–	ಅಸಹಾಯತೆ, ಮೊರೆ ಇಡುವಿಕೆ
ಆರ್ಜವಿ (ಫಾ)	–	ಅಸಹಾಯ, ನಮ್ರ, ದೀನ
ಆಜಾರ (ಫಾ)	–	ರೋಗ, ಕಾಯಿಲೆ,
ಆಜಾರೀ (ಫಾ)	–	ರೋಗಿ, ಕಾಯಿಲೆ, ಬೇನೆ ಬಿದ್ದವ
ಆಜಾದ (ಫಾ)	–	ಸ್ವಾತಂತ್ರ್ಯ
ಆಜಾದೀ (ಫಾ)	–	ಸ್ವಾತಂತ್ರ್ಯತೆ
ಆಜೀಜಿ (ಅರ)	–	ದೈನ್ಯ, ನಮ್ರತೆ, ಶರಣಾಗತಿ, ಅಸಹಾಯ ಸ್ಥಿತಿ
ಆಜೂಬಾಜೂ (ಫಾ)	–	ಆಸುಪಾಸು, ನೆರೆಹೊರೆ
ಆಟಾ (ಫಾ)	–	ಹಿಟ್ಟು
ಆತಷ್(ಫಾ)	–	ಅಗ್ನಿ, ಬೆಂಕಿ
ಆತಿಷ್‌ಬಾಜಿ (ಫಾ)	–	ಪಟಾಕಿ, ಸಿಡಿಮದ್ದು ಹಾರಿಸುವುದು
ಆದತ್ (ಅರ)	–	ರೂಢಿ, ಅಭ್ಯಾಸ, ಚಟ

ಆದಮ್ (ಅರ)	–	ಆದಿಮಾನವ, ಪ್ರಥಮ ಪ್ರವಾದಿ
ಆದಾ (ಅರ)	–	ಖರ್ಚು, ದಾನ, ಸಾಲ ತೀರಿಸು
ಆದಾಬ ಅರ್ಜ್ (ಫಾ)	–	ನಮಸ್ಕರಿಸು, ವಂದನೆ
ಆದಾವತ (ಅರ)	–	ಹಗೆತನ, ಕುತ್ತು
ಆದ್ಮಿ (ಅರ)	–	ಮನುಷ್ಯ, ಗಂಡ
ಆಂಧೀ (ಫಾ)	–	ಬಿರುಗಾಳಿ
ಆನ್ (ಫಾ)	–	ಠೀವಿ
ಆನ್‌ಬಾನ್ (ಫಾ)	–	ವೈಭವ, ವಯ್ಯಾರ, ಒನಪು
ಆಪಖರಾ (ಫಾ)	–	ನೀರಿನ ಪಾತ್ರೆ
ಆಪಮತಲಬೀ (ಫಾ)	–	ಸ್ವಾರ್ಥ ಪರಾಯಣ
ಆಪ ಮುಖ್ತ್ಯಾರ (ಫಾ)	–	ಸ್ವತಃ ಸಿದ್ಧ, ಶಕ್ತಿಶಾಲಿ
ಆಫತ್ (ಅರ)	–	ಆಪತ್ತು, ಸಂಕಟ
ಆಬ (ಫಾ)	–	ತೇಜಸ್ಸು, ಗೌರವ, ನೀರು (ಮಗುವಿನ ಮೊದಲ ಶಬ್ದ 'ಆಬೂ' ಬಂದದ್ದು ಆಬದಿಂದ)
ಆಬಕಾರ (ಫಾ)	–	ಸಾರಾಯಿ ಮಾಡುವವ, ಕಲಾಲ
ಅಬತಾ–ದಾ–ಖ(ಫಾ)	–	ಗೌರವ ವರ್ಚಸ್ಸು
ಆಬಾ (ಅರ)	–	ಅಜ್ಜಂದಿರು, ಪೂರ್ವಿಕರು
ಆಬಾದಗಿರೀ(ಫಾ)	–	ಉತ್ಕರ್ಷಿತ
ಆಬಾದ (ಫಾ)	–	ಉತ್ಕರ್ಷ ಹೊಂದಿದ, ಸಮೃದ್ಧ ತುಂಬಿದ, ನೆಲೆಸಿದ
ಆಬಾದೀ (ಫಾ)	–	ಪರಮಸೌಖ್ಯ, ಜನವಸತಿ
ಆಬಾದಾನೀ (ಫಾ)	–	ಉತ್ಕರ್ಷ, ಏಳ್ಗೆ
ಆಬಾಶಾಯೀ(ಫಾ)	–	ತಿಳಿಗೆಂಪು
ಆಬ್ಕಾರೀ (ಫಾ)	–	ಹೆಂಡ
ಆಬ್ರೂ (ಫಾ)	–	ಮಾನ ಮರ್ಯಾದೆ
ಆಬೇ ಹಯಾತ್ (ಫಾ)	–	ಅಮೃತ, ಜೀವಜಲ

ಆಮದು (ಫಾ)	–	ಆಮದು, ಇಂಪೋರ್ಟ್, ತರಿಸಿಕೊಳ್ಳು
ಆಮದಾನಿ (ಫಾ)	–	ಆದಾಯ, ವರಮಾನ
ಆಮ್‌ಲಾ, ಆಂವಲಾ (ಫಾ)	–	ನೆಲ್ಲಿಕಾಯಿ
ಆಯಬ (ಅರ)	–	ದೋಷ, ನ್ಯೂನ
ಆಯಾ (ಫಾ)	–	ದಾಸಿ, ಸೇವಕಿ
ಆಯಾತ (ಅರ)	–	ಕುರಾನಿನ ಸೂಕ್ತಿಗಳು
ಆಯಾಲ (ತುರ್ಕಿ)	–	ಸಿಂಹದ ಆಯಾಲು, ಕತ್ತಿನ ಮೇಲಿನ ಕೂದಲು
ಆರಬಿ (ಅರ)	–	ಅರಬಸ್ತಾನದ ಅರಬೀ ಭಾಷೆ
ಆರಜೂ (ಫಾ)	–	ಆಶೆ, ಇಚ್ಛೆ, ಒಲವು
ಆರಾಜೀ (ಅರ)	–	ಹೊಲ, ಭೂಮಿ
ಆರಾಮ್ (ಫಾ)	–	ವಿಶ್ರಾಂತಿ, ವಿರಾಮ(ಸಂ.ಆರಾಮ)
ಆರಿಸಾ (ಅರ)	–	ಶೃಂಗಾರ, ಸಿಂಗಾರ, ಶೋಭೆ
ಆರಿಸಾ (ಅರ)	–	ಕನ್ನಡಿ, ಕನ್ನಡಕ
ಆರೀ (ಅರ)	–	ಅಚ್ಚು, ಅಕ್ಷ, ತಂಬೂರಿಯ ತಂತಿಪಟ್ಟಿ
ಆಲಮ್ (ಅರ)	–	ಧ್ವಜ
ಆವಾಜ್ (ಫಾ)	–	ಶಬ್ದ, ಧ್ವನಿ, ದನಿ
ಆವಾಜೀ(ಫಾ)	–	ಸುಸ್ವರ, ಇಂಚರ
ಆವಾರಾ (ಫಾ)	–	ಉಡಾಳ
ಆಶಿಕ (ಫಾ)	–	ಪ್ರೇಮಿ
ಆಶುರಖಾನಾ (ಫಾ)	–	ಮೊಹರಮ್‌ದಲ್ಲಿ ದೇವರು ಕೂಡಿಸುವ ಜಾಗೆ, ಬಡಮುಸ್ಲೀಮ್ ಪ್ರವಾಸಿಗರ ಛತ್ರ
ಆಷಕ (ಫಾ)	–	ಪ್ರೇಮಿ, ಅನುರಾಗಿ
ಆಸಪಾಸ್ (ಫಾ)	–	ಆಸುಪಾಸು, ಅಕ್ಕಪಕ್ಕ
ಆಸಫ್ (ಅರ)	–	ಉನ್ನತಾಧಿಕಾರಿ
ಆಸರ (ಅರ)	–	ಪ್ರಭಾವ, ಸಾಮರ್ಥ್ಯ
ಆಸಬದಾರ್ (ಫಾ)	–	ರಾಜದಂಡವನ್ನು ಕೈಯಲ್ಲಿ ಹಿಡಿದವನು

ಆಸರಾ (ಫಾ)	–	ಆಶ್ರಯ, ಶರಣ, ಭರವಸೆ
ಆಸಾರ್ ಮಹಲ್ (ಅರ)	–	ವಸ್ತು ಪ್ರದರ್ಶನಾಲಯ
ಆಸಾನ (ಫಾ)	–	ಸುಲಭ, ಸುಗಮ
ಆಸಾಮೀ (ಫಾ)	–	ವ್ಯಕ್ತಿ, ಮನುಷ್ಯ, ಆಳು
ಆಸ್ಮಾನ (ಫಾ)	–	ಆಕಾಶ
ಆಸ್ಮಾನೀ (ಫಾ)	–	ಆಕಾಶ ಬಣ್ಣ, ತಿಳಿನೀಲಿ ಬಣ್ಣ
ಆಸ್ತೆ (ಫಾ)	–	ಮೆಲ್ಲಗೆ
ಆಂಸೂ (ಫಾ)	–	ಕಣ್ಣೀರು

*

ಇ

ಇಕಬಾಲ್ (ಅರ)	–	ಸುದೈವ, ಅದೃಷ್ಟ
ಇಕರಾರ (ಅರ)	–	ಒಪ್ಪಂದ, ಮಾತು, ಕಬುಲಾಯಿತಿ
ಇಕ್ತಿದಾರ (ಅರ)	–	ಅಧಿಕಾರಿ
ಇಖಲಾಸ (ಅರ)	–	ಮಿತ್ರತ್ವ, ಪ್ರಾಮಾಣಿಕತೆ
ಇಖಲಾನೀ(ಅರ)	–	ಮಿತ್ರತ್ವದ (ಸಂಬಂಧ)
ಇಜಲಾಸ (ಅರ)	–	ರಾಜ್ಯಾರೋಹಣ ಸಭೆ, ಚೇಂಬರ್, ಕೋಣೆ
ಇಜಹಾರ್ (ಅರ)	–	ಹೇಳಿಕೆ ವಕ್ತವ್ಯ
ಇಜ್ಜತ್ (ಅರ)	–	ಮರ್ಯಾದೆ, ಪ್ರತಿಷ್ಠೆ
ಇಜಾ (ಅರ)	–	ಘಾತ, ಅಪಘಾತ, ಗಾಯ
ಇಜಾಜತ್ (ಅರ)	–	ಅಪ್ಪಣೆ, ಪರವಾನಿಗಿ
ಇಜಾರ್ (ಅರ)	–	ಪಾಯಜಾಮಾ
ಇಜಾಫತ್ (ಅರ)	–	ಉಂಬಳಿಯಾಗಿ ಕೊಟ್ಟ ಗ್ರಾಮ
ಇಜಾಫಾ(ಅರ)	–	ನಿಯುಕ್ತಿ
ಇಜಾಫೆ (ಅರ)	–	ಸಂಬಳದಲ್ಲಿ ಬಢತಿ
ಇಜಾರತ (ಅರ)	–	ಗುತ್ತಿಗೆ, ಕಂತ್ರಾಟ, ಮಕ್ತೆ
ಇಜಾರತದಾರ (ಅರ)	–	ಗುತ್ತಿಗೆದಾರ
ಇಜಾರಾ (ಅರ)	–	ಗುತ್ತಿಗೆ
ಇಜಾರೀ (ಫಾ)	–	ಬಿಳಿಯ ಕಾಲಿನ ಕುರಿ

ಇಜ್ತಿಹಾದ್ (ಅರ)	–	ಕಾಲದೇಶಕ್ಕೆ ಅನುಗುಣವಾಗಿ, ಧರ್ಮಶಾಸ್ತ್ರಕ್ಕಿಂತ ಭಿನ್ನವಾದ ದಾರಿಯನ್ನು ಕಂಡುಕೊಳ್ಳುವುದು
ಇತಫಾರ (ಅರ)	–	ಏಕಮತ, ಸಹಮತಿ, ಏಕವಿಚಾರ
ಇತಬಾರ (ಅರ)	–	ವಿಶ್ವಾಸ, ನಂಬುಗೆ
ಇತಬಾರಾತ (ಅರ)	–	ಆದರಾತಿಥ್ಯ, ಸರಬರಾಜು
ಇತಬಾರೀ (ಅರ)	–	ವಿಶ್ವಾಸದ, ಭರವಸೆಯ
ಇತಮಾಮ (ಅರ)	–	ಪರಿಜನ, ಅಭಿಜನ, ಪರಿವಾರ
ಇತರಾಜೀ (ಅರ)	–	ಕೋಪ, ಅಸಮಾಧಾನ
ಇತರಾಜ (ಅರ)	–	ಕೋಪಗೊಂಡ, ಕೆರಳಿದ
ಇತರಾಯಲ (ಫಾ)	–	ಕುಚೋದ್ಯದ, ತುಂಟ
ಇತಲಾಖ (ಅರ)	–	ಉಂಬಳಿ, ಸಂಬಳ, ರಾಜ ಸಹಾಯ
ಇತಲಾಖೀ (ಅರ)	–	ಮಿತ್ರತ್ವ
ಇತಲ್ಲಾ (ಅರ)	–	ಸುದ್ದಿ, ವೃತ್ತಾಂತ
ಇತ್ತದಾಯ್ (ಅರ)	–	ಪ್ರಾರಂಭ
ಇತ್ತಿಫಾಕ (ಅರ)	–	ಸಮ್ಮತಿ, ಸಹಮತಿ, ಈಕ್ಯಮತ
ಇತ್ತಿಹಾದ (ಅರ)	–	ಒಕ್ಕಟ್ಟು, ಮಿತ್ರತ್ವ
ಇಂತಕಾಲ (ಅರ)	–	ಮರಣ
ಇಂತಜಾಮ (ಅರ)	–	ವ್ಯವಸ್ಥೆ
ಇಂತಜಾರೀ (ಅರ)	–	ದಾರಿ ಕಾಯುವಿಕೆ, ಪ್ರತೀಕ್ಷೆ
ಇದಗಾ (ಫಾ)	–	ಹಬ್ಬದ ಪ್ರಾರ್ಥನಾ ಮಂದಿರ, ಮಂಟಪ
ಇಂದೀ (ಅರ)	–	ಈದ ಹಬ್ಬದ ಕಾಣಿಕೆ, ಬಕ್ಷೀಸು
ಇನಸಾಫ (ಅರ)	–	ನ್ಯಾಯ, ನಿರ್ಣಯ, ತೀರ್ಪು
ಇನಫಿಸಾಲ (ಅರ)	–	ನಿರ್ಣಯ, ತೀರ್ಪು
ಇನ್‌ಶಾ ಅಲ್ಲತಾಲಾ (ಅರ)	–	(ಉದ್ಗಾರ) ದೇವರ ಇಚ್ಛೆ ಇದ್ದರೆ
ಇನಾಮ್ (ಅರ)	–	ಉಂಬಳಿ, ಉಡುಗೊರೆ, ಕಾಣಿಕೆ
ಇನಾಮಕಸರ (ಅರ)	–	ಉಂಬಳಿಯಲ್ಲಿ ಅಧಿಕ, ಹೆಚ್ಚು ಉಂಬಳಿ

ಇನಾಮದಾರ (ಅರ)	–	ಉಂಬಳ ಗ್ರಾಮದ ಒಡೆಯ
ಇನಾಮತ (ಅರ)	–	ಉಂಬಳಿ, ಇನಾಮ ಗ್ರಾಮ
ಇನಾಯತ್ (ಅರ)	–	ಕೃಪೆ, ಅನುಗ್ರಹ
ಇನ್ಕಾರ (ಅರ)	–	ಅಲ್ಲಗಳೆಯುವಿಕೆ
ಇನ್ಸಾಫ (ಅರ)	–	ನ್ಯಾಯ ನಿರ್ಣಯ
ಇನ್ಸಾಫೀ (ಅರ)	–	ನ್ಯಾಯ ಬುದ್ಧಿಯುಳ್ಳವ, ನ್ಯಾಯ ಪ್ರವೃತ್ತಿ
ಇನ್ಕಿಲಾಬ (ಅರ)	–	ಕ್ರಾಂತಿ
ಇಫರಾತಫರ್ (ಫಾ)	–	ಅಪರಾತಫರಾ, ದುರುಪಯೋಗ
ಇಫಾಜತ್ (ಅರ)	–	ಸಂರಕ್ಷಣೆ (ಹಿಫಾಜತ್)
ಇಬಾದತ (ಅರ)	–	ಪ್ರಾರ್ಥನೆ, ನಮಾಜು
ಇಬಾದತೀ (ಅರ)	–	ಧಾರ್ಮಿಕ
ಇಬಾರತ (ಅರ)	–	ವಾಕ್ಯ, ಅಭಿವ್ಯಕ್ತಿ, ಶಬ್ದಪ್ರಯೋಗ
ಇಬ್ಲಾಗ್ (ಅರ)	–	ರವಾನಗಿ
ಇಬ್ಲಿಸ್ (ಅರ)	–	ದುಷ್ಟ, ಕುಚೋದ್ಯ
ಇಬೀನಿಬ್ಬ, ಇಬ್ನ (ಅರ)	–	ಮಗ, ಪುತ್ರ
ಇಭ್ರತ್ (ಅರ)	–	ಮರ್ಯಾದೆ, ಪ್ರತಿಷ್ಠೆ
ಇಮಲಾ (ಅರ)	–	ಕಟ್ಟಡ, ಮಂದಿರ, ವಾಸ್ತು
ಇಮಲೀ (ಫಾ)	–	ಹುಣಸೆ
ಇಮಾನ (ಅರ)	–	ನಂಬುಗೆ, ವಿಶ್ವಾಸ
ಇಮಾನೀ (ಅರ)	–	ಪ್ರಾಮಾಣಿಕ, ವಿಶ್ವಾಸವುಳ್ಳ
ಇಮಾಂ (ಅರ)	–	ಆಧ್ಯಾತ್ಮಿಕ ನಾಯಕ
ಇಮಾರತ (ಅರ)	–	ಕಟ್ಟಡ
ಇರಸಾಲ (ಅರ)	–	ಅಚ್ಚ, ಉತ್ಕೃಷ್ಟ, ಬೆಂಕಿ ಧೂರ್ತ, ಚಾಣಾಕ್ಷ
ಇರಾದಾ (ಅರ)	–	ಉದ್ದೇಶ, ಅಭಿಪ್ರಾಯ, ಇರಾದೆ
ಇಲಮ್ (ಅರ)	–	ಜ್ಞಾನ ವಿಜ್ಞಾನ
ಇಲಮ್‌ಬಾಜ (ಅರ)	–	ಜಾಣ, ಪಂಡಿತ
ಇಲಾಖಾ (ಅರ)	–	ಪ್ರಾಂತ, ವಿಷಯ, ಸಂಬಂಧ, ವಿಭಾಗ

ಇಲಾಜ್ (ಅರ)	–	ಉಪಾಯ, ಚಿಕಿತ್ಸೆ, ಹಂಚಿಕೆ, ಆರೈಕೆ
ಇಲಾಹೀ (ಅರ)	–	ಅಲ್ಲಾ, ದೇವರು, ದೈವೀ, ಈಶ್ವರೇಚ್ಛೆಯ
ಇಶಾರತ್ (ಅರ)	–	ಸನ್ನೆ, ಗುರುತು, ಲಕ್ಷಣ (ಇಶಾರಾ)
ಇಶೀಮ (ಅರ)	–	ಅಭಿಮಾನ, ಹೆಮ್ಮೆ
ಇಶ್ಕ (ಅರ)	–	ಪ್ರೇಮ, ಪ್ರೀತಿ, ಅನುರಾಗ
ಇಷಾರೆ (ಅರ)	–	ಸಂಕೇತ, ಸನ್ನೆ
ಇಷ್ಕ (ಅರ)	–	ಪ್ರೇಮ
ಇಸಮ (ಅರ)	–	ಹೆಸರು, ಮನುಷ್ಯ, ವ್ಯಕ್ತಿ, ವಿಷಯ
ಇಸಮವಾರ (ಅರ)	–	ವ್ಯಕ್ತಿಗತವಾಗಿ
ಇಸವೀ (ಅರ)	–	ಕ್ರಿಸ್ತಶಕದ
ಇಸವೀಸನ್(ಅರ)	–	ಕ್ರಿಸ್ತಶಕದ ವರ್ಷ
ಇಸಲಾ (ಅರ)	–	ಇಂತಹ, ಈ ಬಗೆಯ
ಇಸ್ತಕಬೀಲ್ (ಅರ)	–	ಮೊದಲು ಮಾಡಿ
ಇಸ್ತಮಾಲ (ಅರ)	–	ಉಪಯೋಗ, ಬಳಕೆ
ಇಸ್ತಮಾಲತ್ (ಅರ)	–	ಉತ್ತೇಜನ, ಪ್ರೋತ್ಸಾಹ
ಇಸ್ತಮಾಲೀ (ಅರ)	–	ವಾಡಿಕೆಯ, ಮಾಮೂಲಿ
ಇಸ್ತಮೇಲ(ಅರ)	–	(ಜಮಾಖರ್ಚಿನ ಅಂಕೆಯಲ್ಲಿ) ಬದಲಾವಣೆ
ಇಸ್ತಾದ (ಫಾ)	–	ಸ್ಥಾವರ ಆಸ್ತಿ
ಇಸ್ರಾಲ (ಅರ)	–	ರವಾನೆ, ಹಣ ಗಳಿಸುವಿಕೆ
ಇಸ್ತಿಫಾ (ಅರ)	–	ರಾಜೀನಾಮೆ, ತ್ಯಾಗಪತ್ರ
ಇಸ್ತರೀ (ಪೋ)	–	ಇಸ್ತರೀ ಪೆಟ್ಟಿಗೆ(ಎಸ್ತಿರರ್)
ಇಸ್ತಿಹಾರ (ಅರ)	–	ಘೋಷಣೆ, ನೋಟಿಫಿಕೇಶನ್, ಅಧಿಸೂಚನೆ
ಇಸ್ತಿಹಾರ ನಾಮೆ (ಅರ)	–	ಪ್ರಕಟನ ಪತ್ರಿಕೆ, ಜಾಹೀರಾತು ಪತ್ರ
ಇಸ್ಲಾಂ (ಅರ)	–	ದೈವಕ್ಕೆ ಶರಣು ಹೋಗುವುದು ಎಂಬ ಅರ್ಥವುಳ್ಳ ಧರ್ಮ

*

ಈ

ಈದ (ಅರ)	–	ಮುಸಲ್ಮಾನರ ಹಬ್ಬ
ಈದಮಿಲಾದ (ಅರ)	–	ಈದಮಿಲಾದ ಹಬ್ಬ
ಈಂಟ (ಫಾ)	–	ಇಟ್ಟಿಗೆ, ಇಟ್ಟಂಗಿ
ಈದೀ (ಅರ)	–	ಹಬ್ಬದ ಬಕ್ಷೀಸಾ
ಈಮಾನದಾರ (ಫಾ)	–	ಪ್ರಾಮಾಣಿಕ, ಶ್ರದ್ಧಾವಂತ
ಈಮಾನದಾರೀ (ಫಾ)	–	ಪ್ರಾಮಾಣಿಕತೆ
ಈಸಾಯಿ (ಅರ)	–	ಕ್ರೈಸ್ತ ಮತದವನು

*

ಉ

ಉಜರು, ಉಜರೂ (ಅರ) – ಆಕ್ಷೇಪ, ವಿರೋಧ, ಅಡ್ಡಿ

ಉಜಾಲಾ (ಫಾ) – ಬಿಳಿ, ಗೌರ

ಉಜೂರ (ಅರ) – ನೆಪ, ನಿಮಿತ್ತ, ಆಕ್ಷೇಪ, ಅಡ್ಡಿ

ಉದೀ (ಅರ) – ಊದಿ ಬಣ್ಣದ, ಅಂಗಾರ, ಪವಿತ್ರ ಬೂದಿ, ವಿಭೂತಿ

ಉಧಾರ (ಫಾ) – ಉದ್ದರಿ, ಸಾಲ

ಉಮದಾ (ಅರ) – ಉತ್ತಮ, ಉತ್ಕೃಷ್ಟ

ಉಮರಾವ (ಅರ) – ಸರದಾರರು, ಅಮಲದಾರರು (ಬಹುವಚನ)

ಉಮೇದ (ಫಾ) – ಆಸೆ, ಹುಮ್ಮಸ, ವಿಶ್ವಾಸ, ಭರವಸೆ, ಹರೆ, ಹಗೆ, ಪ್ರಾಯ

ಉಮೇದುವಾರ (ಅರ) – ಅಭ್ಯರ್ಥಿ, ಚುನಾವಣೆಗೆ ನಿಲ್ಲುವ ಸ್ಪರ್ಧಿ

ಉಮೇದುವಾರಿ (ಅರ) – ಭರವಸೆ, ನಿರೀಕ್ಷೆ

ಉರೂಸ್ (ಅರ) – ಮುಸಲ್ಮಾನ್, ಸಾಧುವಿನ ಆರಾಧನೆ, ಜಾತ್ರೆ

ಉಲ್ಟಾ ಉಲಟ್ (ಫಾ) – ವಿರುದ್ಧ–ತಿರುವು

ಉಲೇಮಾ (ಅರ) – ಮುಸಲ್ಮಾನ ಧರ್ಮದ ಶಾಸ್ತ್ರಿ

ಉಲ್ಲೂ (ಫಾ) – ಗೂಬೆ, ಮೂರ್ಖ

ಉಸ್ತಾದ–ಉಸ್ತಾದಿ (ಅರ) – ಗುರು, ಆಚಾರ್ಯ, ವಿದ್ವಾಂಸ, ಕೋವಿದ

ಉಸ್ತುವಾರಿ (ಫಾ)	–	ಸರಿಪಡಿಸುವಿಕೆ, ರಿಪೇರಿ ಮಾಡುವಿಕೆ, ಎಚ್ಚರಿಕೆಯಿಂದ ನೋಡಿಕೊ
ಉಂದ (ಫಾ) (ಅರ–ಉಮ್ದಾ)	–	ಗೌರವಸ್ಥ, ಮರ್ಯಾದೆಗೆ ಯೋಗ್ಯ

*

ಊ

ಊದ (ಅರ)	–	ಸುಗಂಧ ದ್ರವ್ಯ
ಊರ್ಫ (ಅರ)	–	(ಅವ್ಯಯ) ಅಂದರೆ, ಅಥವಾ ಹೆಸರಾದ

*

ಏ–ಐ

ಐಕತರಫೀ (ಫಾ)	–	ಪಕ್ಷಪಾತವಿದ್ದ
ಐಕ ಫಸಲೀ (ಫಾ)	–	ಒಂದೇ ಬೆಳೆಯನ್ನು ಕೊಡುವ ಭೂಮಿ
ಐಕಸಾನು (ಫಾ–ಯಕ್ಸಾನು)	–	ಎಡಬಿಡದೆ, ಒಂದೇ ಸವನೆ
ಐಕದಮ್ (ಸಂ+ಫಾ)	–	ಕೂಡಲೆ, ಒಮ್ಮೆಲೆ, ತತ್‌ಕ್ಷಣ
ಐಕಾಐಕಿ (ಫಾ–ಯಕಾಯಕ್)	–	ಒಮ್ಮೆಲೇ, ಇದ್ದಕ್ಕಿದ್ದಂತೆ
ಐಚ್–ಪೇಚ್(ಫಾ)	–	ಐಚು–ಪೇಚು, ಮೋಸ–ವಂಚನೆ
ಐಲಗಾರ (ಫಾ)	–	ಆಕ್ರಮಣ, ದಿಗ್ವಿಜಯ, ದಂಡೆತ್ತಿ ಹೋಗು

*

ಐ

ಐನಜಮಾ (ಅರ)	–	ಪ್ರತ್ಯಕ್ಷಜಮಾ(ರಶೀದಿ), ವಾಸ್ತವಿಕ ಜಮಾ
ಐನಾ (ಫಾ)	–	ಕನ್ನಡಿ
ಐನಾಮಹಲ (ಫಾ)	–	ಕನ್ನಡಿ ಅರಮನೆ, ಶೀಶ್ ಮಹಲ್
ಐನುಲ್‌ಮುಲ್ಕ್ (ಅರ)	–	ರಾಜ್ಯದ ಧರ್ಮದರ್ಶಿ (ಒಂದು ಬಿರುದು)
ಐಬ (ಅರ)	–	ಕುಂದು, ನ್ಯೂನ
ಐಲಾನ (ಅರ)	–	ಘೋಷಣೆ, ಪ್ರಕಟನೆ, ಸಾರುವಿಕೆ
ಐವಜ (ಅರ)	–	ಒಂದರ ಬದಲಾಗಿ
ಐವಜೀ (ಅರ)	–	ಬದಲಾಗಿ
ಐಷ್ (ಅರ)	–	ಸುಖ, ಭೋಗ, ವಿಲಾಸ

*

ಓ

ಐಷಾರಾಮ (ಅರ+ಫಾ)ಐಷೇ ಆರಾಮ	–	ಸುಖ ವಿಲಾಸ
ಓಢಣಿ	–	ದುಪಟ್ಟಾ, ಚಿಕ್ಕ ಹೊದಿಕೆ ವಸ್ತ್ರ

*

ಔ

ಔರತ್ (ಅರ)	–	ಹೆಂಗಸು, ಹೆಂಡತಿ, ಉಪಪತ್ನಿ
ಔರಸ್ (ಅರ)	–	ಸಕ್ರಮ, ವಿವಾಹ ಜನ್ಯ ಸಂತಾನ
ಔಲಾದ (ಅರ)	–	ಸಂತತಿ
ಔಲಿಯಾ (ಅರ)	–	ಮುಸಲ್ಮಾನ ಸಾಧು, ಸಾಧುಗಳು, ಸಂತರು

*

ಅಂ

ಅಂಗುಸ್ತಾನ (ಫಾ)	–	ಚಿಪ್ಪಿಗರು, ಬೊಟ್ಟಿನಲ್ಲಿ ಹಾಕುವ ಕವಚ
ಅಂಗೂರ (ಫಾ)	–	ದ್ರಾಕ್ಷಿ
ಅಂಜೂರ (ಅರ)	–	ಅತ್ತೀಮರದ ಜಾತಿಯ ಒಂದು ಬಗೆಯ ಮರ
ಅಂದಾಜ್ (ಫಾ)	–	ಅಂದಾಜು, Estimate
ಅಂದಾಜು (ಫಾ)ಅಂಜೀರದಿಂದ–		ಊಹೆ, ಊಹಿಸದ ಅಳತೆ ಲೆಕ್ಕ, ಅಂದಾಜು
ಅಂದೇಶಾ (ಫಾ)	–	ಸಂಶಯ, ಅಂಜಿಕೆ
ಅಂಬರಖಾನಾ (ಅರ)	–	ವಸ್ತುಸಂಗ್ರಹಾಲಯ
ಅಂಬರು (ಅರ)	–	ಒಂದು ಬಗೆಯ ಸುಗಂಧ ದ್ರವ್ಯ
ಅಂಬಾರ (ಅರ)	–	ಕಾಳು ತೆಗೆದ ಹುಲ್ಲಿನ ರಾಶಿ
ಅಂಬಾರೀ (ಅಂಬರಿ) (ಅರ)	–	ಆನೆಯ ಮೇಲಿನ ಆಸನ, ಅಂಬಾರಿ

*

ಕ

ಕಚ್ಚಾ (ತುರ್ಕಿ)	–	ಅಪಕ್ವ
ಕಚ್ಚಾಖರಡು (ಫಾ)	–	ಕಚ್ಚಾಲೆಕ್ಕ
ಕಚೇರಿ (ಫಾ) (ಕಚ್‌ಹರದಿಂದ)	–	ಕಾರ್ಯಾಲಯ
ಕಚೋರಿ (ಫಾ)	–	ಕಡಬು
ಕರ್ಜ (ಅರ)	–	ಸಾಲ
ಕಜಾಖ (ತುರ್ಕಿ)	–	ದುಷ್ಟ, ಕೆಟ್ಟ, ಜಗಳಗಂಟ ಕಜಿಯಾ
ಕರ್ಜಾಲಾ (ಅರ)	–	ಸಾಲವೆಂದು ಕೊಟ್ಟ
ಕರ್ಜೀ (ಅರ)	–	ಸಾಲವೆಂದು ದೊರೆತ
ಕಜ್ಜೆ ದಲಾಲ (ಅರ)	–	ವಕೀಲರಿಗೆ ವ್ಯಾಜ್ಯಗಳನ್ನು ಪೂರೈಸುವ ದಲ್ಲಾಳಿ
ಕಂಗ್‌ಲಾ (ಫಾ)	–	ಕಂಗಾಲ, ದರಿದ್ರ
ಕಂಗುರಿ, ಕಂಗೋರೆ, (ಫಾ)	–	೧. ಬಟ್ಟೆಯ ಅಂಚಿನಲ್ಲಿರುವ ಕಸೂತಿ ೨. ಕಟ್ಟಡದಲ್ಲಿ ಗೋಡೆಯಲ್ಲಿ ಮಾಡಿದ ಕೆತ್ತನೆಯ ಅಲಂಕಾರ
ಕಂಜರ್–ಖಂಜರ್(ಅರ)	–	ಎರಡುಸಲ ಬಾಗಿರುವ ಅಲಗುಳ್ಳ ಕಿರುಕತ್ತಿ, ಕಠಾರಿ
ಕಂಜೂಸ್(ಫಾ)	–	ಕೃಪಣ, ಜೀನ, ಜಿಪುಣ
ಕಂದೀಲು (ಅರ)	–	ಮೇಣದ ಬತ್ತಿ, ಲಾಟೀನು, ಲಾಂದ್ರ, ಕಂದೀಲು

ಕಂದೂರಿ (ಫಾ)	–	ಮುಸಲ್ಮಾನರ ಒಂದು ಹಬ್ಬ
ಕಂಬರ್ತಿ (ಅರ+ಫಾ)	–	ನಷ್ಟ ತುಂಬಿಕೊಡುವಿಕೆ (ಕಮ್+ಭರ್ತಿ)
ಕಂಬ್ಳಿ (ಫಾ)	–	ಕಂಬಳಿ ಅಧಿಕಾರಿ, ಉಗ್ರಾಣಾಧಿಕಾರಿ
ಕತಬಾ (ಅರ)	–	ಸರಕಾರೀ ಸಾಲಪತ್ರ, ಬಾಂಡು, ಕರಾರು ಪತ್ರ, ಕತಬಿ
ಕತವಾರ (ಫಾ)	–	ದಂಡಿನ ಹಿಂದಿನಿಂದ ನಡೆದ ಸಾಮಗ್ರಿ, ಸೇವಕರು ಇತ್ಯಾದಿ
ಕತಾರ (ಅರ)	–	ಗೆರೆ, ಪಂಕ್ತಿ, ಸಾಲು ಇತ್ಯಾದಿ
ಕತ್ತಲ (ಅರ)	–	ವಧೆ, ಸಂಹಾರ, ಖೂನಿ, ಕೊಲೆ
ಕತ್ತಲಖಾನಾ (ಅರ)	–	ಕಸಾಯಿಖಾನೆ
ಕತ್ತಲರಾತ್(ಅರ)	–	ಮೊಹರಮ್ಮಿನ ದಶಮಿಯ ರಾತ್ರಿ
ಕದರ (ಅರ)	–	ಬೆಲೆ, ಕಿಮ್ಮತ್ತು, ಮಹತ್ವ, ರಸಗ್ರಾಹತೆ
ಕದರದಾನ(ಫಾ)	–	ರಸಗ್ರಹಣ ಮಾಡುವವ
ಕದೀಮ (ಅರ)	–	ಹಳಬ, ಪೂರ್ವಿಕ
ಕನಾತ (ಅರ)	–	ಡೇರೆಯ ಮರೆ, ಪಟಲ
ಕಪಾಟ್ (ಪೋ)	–	ಕಪಾಟು, ಅಲಮಾರು, ಬಾಗಿಲ, ಬಾಗಿಲದ ಹಲಗೆ
ಕಪಾಶೀ (ಫಾ)	–	ಹತ್ತಿ, ಅರಳೆ
ಕಪಾಸ (ಫಾ)	–	ಹತ್ತಿ, ಅರಳೆ
ಕಪನೀ (ಅರ)	–	ಬೈರಾಗಿಗಳು ತೊಡುವ ತೋಳಿಲ್ಲದ ಉದ್ದ ಅಂಗಿ– ಕಫನ್ ಮೇಲೆ ಜೀವಂತ ಇದ್ದು ಶವವಸ್ತ್ರ
ಕಫನ (ಅರ)	–	ಮುಸಲ್ಮಾನರ ಪ್ರೇತದ ಆವರಣ ಬಟ್ಟೆ
ಕಬಜಾ (ಅರ)	–	ವಶ, ಸ್ವಾಮಿತ್ವ, ಪ್ರಭುತ್ವ
ಕಬರ (ಅರ)	–	ಮುಸಲ್ಮಾನರ ಸಮಾಧಿ, ಗೋರಿ
ಕಬರಸ್ತಾನ (ಫಾ)	–	ಮುಸಲ್ಮಾನರ ಸ್ಮಶಾನ

ಕರ್ಬಲಾ (ಅರ)	–	ಮೊಹರಂ ಆಚರಣೆ ವೇಳೆ ನಡೆಯುವ ಮೇಳ,
ಕಬಾಲಾ (ಅರ)	–	ಬಿಕರಿ ಪತ್ರ, ಮಾರಾಟದ ದಸ್ತವೈಜು
ಕಬಾಬ, ಕಬಾಬು (ಫಾ+ಅರ)	–	ಕೆಂಡದಲ್ಲಿ ಸುಟ್ಟ ಮಾಂಸ
ಕಬಾಯಿ (ಫಾ)	–	ನಿಲುವಂಗಿ
ಕಬಿಲಾ (ಅರ)	–	ತಂಡ, ಕುಟುಂಬ, ಹೆಂಡತಿ
ಕಬೂತರ (ಫಾ)	–	ಪಾರಿವಾಳ
ಕಬೂಲ್ (ಅರ)	–	ಸಮ್ಮತ, ಸ್ವೀಕೃತ, ಒಪ್ಪಿಕೊಂಡ
ಕಬೂಲಾತಿ (ಅರ)	–	ಒಪ್ಪಂದ
ಕಬೂಲಿ (ಅರ)	–	ಒಪ್ಪಿಗೆ, ಸಮ್ಮತಿ
ಕಮತರತಾ (ಫಾ)	–	ಕುಂದುಕೊರತೆ, ತ್ರುಟಿತ
ಕಮತಾವಾ (ಫಾ)	–	ನಾಣ್ಯ ಬದಲಾವಣೆ, ಕಮೀಶನ್
ಕಮರ (ಫಾ)	–	ನಡ ಟೊಂಕ, ಸೊಂಟ
ಕಮರಪಟ್ಟಾ (ಫಾ)	–	ನಡಪಟ್ಟಿ, ಬೆಲ್ಟ
ಕಮರಬಂದ (ಫಾ)	–	ನಡಪಟ್ಟಿ, ನಡಕ್ಕೆ ಕಟ್ಟುವ ವಸ್ತ್ರ
ಕಮ್ (ಫಾ)	–	ಕಡಿಮೆ, ಕಮ್ಮಿ
ಕಮಾನ (ಫಾ)	–	ಬಿಲ್ಲು, ಧನುಷ್ಯ, ಕಮಾನು
ಕಮಾಯಿ (ಫಾ)	–	ಗಳಿಕೆ, ಸಂಪಾದನೆ, ಹದಮಾಡು
ಕಮಾಲ್ (ಅರ)	–	ಸಾಧನೆ, ಪೂರ್ಣತೆ, ಹೆಚ್ಚಿನ, ಅತಿರೇಕ
ಕಮಾಯಿಷಿ (ಫಾ)	–	ವ್ಯವಹಾರದಲ್ಲಿ ಬಂದ ಲಾಭ
ಕಮೀ (ಫಾ)	–	ಕೊರತೆ, ದೋಷ, ಕಡಿಮೆ
ಕಮೀಜಾಸ್ತ /ಕಮೀಜಾದಾ (ಫಾ)	–	ಕಡಿಮೆ, ಹೆಚ್ಚು
ಕಯ್‌ರೀ, ಕೈರೀ (ಫಾ)	–	ಮಾವಿನಮಿಡಿ
ಕರಾಮತ(ಅರ)	–	ಮಹತ್ಕಾರ್ಯ, ಅದ್ಭುತ ಕೆಲಸ, ಮಾಯಮಾಟ, ಪವಾಡ
ಕರಾಮತೀ (ಅರ)	–	ಚತುರ, ಕಾರ್ಯ ಕುಶಲ
ಕರಾರ್ (ಅರ)	–	ನಿಶ್ಚಯ, ಒಡಂಬಡಿಕೆ

ಕರಾರನಾಮಾ (ಅರ)	–	ಒಪ್ಪಂದ ಪತ್ರ, ಒಡಂಬಡಿಕೆ
ಕರಾದಿ (ಅರ)	–	ಮಲೆನಾಡಿನ ಜನರಲ್ಲಿ ಒಂದು ಜಾತಿ,
ಕರಾರೀ (ಅರ)	–	ಏಕನಿಷ್ಠ, ವಚನ ಪಾಲಿಸುವವ
ಕರಾರುವಾಕ್(ಫಾ)	–	ಸರಿಯಾದ, ಕಟ್ಟುನಿಟ್ಟಾದ
ಕರಾಮತ್, ಕರಾಮತಿ, ಕಿಸಾಮತಿ	–	ಪವಾಡ, ಮಹಿಮೆ, ವ್ಯಂಗ್ಯ
ಕರ್ದಾಣದಾರ (ಫಾ)	–	ಭೂ–ಸಾಗುವಳಿದಾರ
ಕರ್ಯಾಣ (ಅರ)	–	ಸಣ್ಣಗ್ರಾಮ
ಕಲಗೀ (ಫಾ)	–	ತುರಾಯಿ
ಕಲಗೀತುರಾ (ಫಾ)	–	ಶೃಂಗಾರಿಕ ಲಾವಣಿಯ ಹಿಂದೆ
ಕಲಂದರ್ (ಅರ)	–	ಫಕೀರ್, ರೇಷ್ಮೆಯ ಅಸ್ತರ
ಕಲಮ್ (ಅರ)	–	ಪೆನ್ನು, ಚಾಕು, ಲೇಖನಿ, ಪರಿಚ್ಛೇದ ಕಾನೂನು ನಿಯಮ
ಕಲತಾನಿ–ಕತ್ತಾನ (ಅರ)	–	ದಪ್ಪನೂಲಿನ ಬಟ್ಟೆ, ಕ್ಯಾನವಾಸು ಜಾತ್ರೆ, ಇರಾಕದಲ್ಲಿಯ ಒಂದು ಊರು ಅಲ್ಲಿ ಹುಸೇನರ ಕೊಲೆಯಾಯಿತು .ಹಿ ೬೧ರಲ್ಲಿ ಇಡುವುದಕ್ಕಾಗಿ ಮಾಡಿದ ಮರದ ಪೆಟ್ಟಿಗೆ, ಒಂದು ಆಭರಣ ಕರೆಕಟ್ಟುವವರು
ಕಲಮದಾನಿ (ಫಾ)	–	ಲೆಕ್ಕಣಿಕೆ ಹಾಗೂ ಮಸಿಯ ಕುಡಿಕೆಯನ್ನು
ಕಲಲು, ಖಲಲು (ಅರ)	–	ಹಾಳು, ಭಂಗ, ನಾಶ
ಕಲಮೀ (ಅರ)	–	ಕಲಮುಗಳುಳ್ಳ, ಬರಹ ಮೂಲಕವಾದ, ಕಲಮೀ ಮಾವಿನ ಹಣ್ಣು
ಕಲಾಬತೂ (ಫಾ)	–	ಜರತಾರಿಯ, ರೇಶ್ಮೆಯ ದಾರ
ಕಲಾಯಿ, ಕಲಾಯ, ಕಲೀ(ಅರ)	–	ಒಂದು ಧಾತುವಿನ ಮೇಲೆ ಇನ್ನೊಂದು ಲೋಹದ ಲೇಪ, ತಾಮ್ರ ಹಿತ್ತಾಳೆ ಪಾತ್ರೆಗಳು ಕಿಲುಬಬಾರದೆಂದು ಅವುಗಳಿಗೆ ತವರದಿಂದ ಹಾಕುವ ಲೇಪ
ಕಲಾಲ (ಫಾ)	–	ಸಾರಾಯಿ ತಯಾರಿಸುವವ
ಕಲಾಲೀ (ಅರ)	–	ಮಧ್ಯ ವ್ಯವಸಾಯ ಧೂರ್ತ, ಕಪಟ

ಕಲಾಸೀ–ಖಲಾಸೀ (ಅರ)	–	ಕೂಲಿಕಾರ (ಹಡಗಿನಲ್ಲಿ), ಗುಡಾರು ನೋಡಿಕೊಳ್ಳುವವನು,
ಕಲ್ಲಾ (ಫಾ)	–	ಕಲ್ಲೀ ಮೀಶೆ, ಕೆನ್ನೆ ಕೂದಲು, ಹುಂಜದ ತುರಾಯಿ, ಒದರಾಟ– ಚೀರಾಟ
ಕಲಿಜಾ (ಫಾ)	–	ಧೈರ್ಯ, ಹೃದಯ, ಎದೆ
ಕಲಿಂದರ (ಫಾ)	–	ಮುಸಲ್ಮಾನ ಸಾಧು
ಕವಾ (ಅರ) (ಕವ್ವಾ)	–	ಕಷಾಯ
ಕವಾಯಿತ (ಅರ)	–	ಸಂಚಲನ, ಡ್ರಿಲ್
ಕವಾಲ (ಅರ)	–	ಕವಾಲೀ ಪದಗಳನ್ನು ಹಾಡುವವ
ಕವಾಲೀ (ಅರ)	–	ಕವಾಲೀ ಗಾಯನ, ಸೂಫೀ ಭಕ್ತಿ ಕೀರ್ತನೆ–ಪದಗಳು
ಕಶೀದಾ (ಫಾ)	–	ಕಸೂತಿ
ಕಸಬ (ಅರ)	–	ಕೌಶಲ್ಯ, ಚತುರತೆ, ಕಲೆ, ಗಳಿಕೆ
ಕಸಬಾ (ಅರ)	–	ದೊಡ್ಡ ಊರು, ಊರಿನ ಮುಖ್ಯ ವಸತಿ
ಕಸಬೀ (ಅರ)	–	ಕುಶಲ, ಧೂರ್ತ, ಖದೀಮ
ಕಸಬೀಣ (ಅರ)	–	ವೇಶ್ಯೆ, ಗಳಿಸುವವಳು
ಕಸಮ್ ಬಸಮ್ (ಫಾ)	–	ವೇಶ್ಯೆ, ಸೂಳೆ
ಕಸಕಸೆ–ಗಸಗಸೆ (ಫಾ)	–	ಕಸಕಸಿ, ಸಾಸುವೆ ಆಕಾರದ ಬಿಳಿ ಸಾಂಬಾರಕಾಳು
ಕಸರ್ (ಅರ)	–	ಕುಂದು, ಕೊರತೆ, ದೋಷ, ಜ್ವರ
ಕಸರಕಾಟ (ಫಾ)	–	ಉಳಿತಾಯ, ಮಿತವ್ಯಯ
ಕಸರತ್ (ಅರ)	–	ವ್ಯಾಯಾಮ, ಅದ್ಭುತ
ಕಸಲತ್ (ಅರ)	–	ಪೀಡೆ, ಸಂಕಟ, ಪರಿಶ್ರಮ
ಕಸಾಈ (ಅರ)	–	ಕಟುಕ, ವಧಿಕ, ಕಠೋರ, ದುಷ್ಟ
ಕಸಾಬ (ಅರ)	–	ಕಟುಕ
ಕಸಾಬೀ (ಅರ)	–	ಕಟುಕನ ವ್ಯವಸಾಯ
ಕಸಾಲತ್ (ಅರ)	–	ತೊಂದರೆ, ಪೀಕಲಾಟ

ಕಸಾಲತೀ (ಅರ)	–	ದುಡಿಯುವವ, ಕಷ್ಟಸಾಧ್ಯ
ಕಸಾಲಾ (ಅರ)	–	ಆಯಾಸ, ಕಷ್ಟ, ಜುಲುಮೆ, ಅತ್ಯಾಚಾರ
ಕಸಾಲೆ–ಕಸಾರೆ (ಅರ)	–	ಬೇನೆ, ಕುತ್ತ, ರೋಗ, ಕಾಹಿಲೆ
ಕಸಿ, ಕಶಿ, ಖಸೀ (ಅರ)	–	ಕತ್ತರಿಸು, ಹೋರಿಯ ಬೀಜ ಒಡೆಯುವಿಕೆ
ಕಸೀದಾ (ಫಾ)	–	ಚಾರಿತ್ರಿಕ ಕಾವ್ಯದ ಒಂದು ಶೈಲಿ
ಕಸೂತಿ–ಕಶೀದಹ್ (ಫಾ)	–	ಬಟ್ಟೆಗೆ ಬಣ್ಣದ ದಾರದಿಂದ ಅಲಂಕಾರ
ಕಸೂರ್ (ಅರ)	–	ದೋಷ, ತಪ್ಪು, ದುರ್ಲಕ್ಷ್ಯ
ಕಹಾರ್ (ಫಾ)	–	ಪಲ್ಲಕ್ಕಿಯನ್ನು ಎತ್ತುವವ, ಹಾಸುವವನು
ಕಾಕಾ (ಫಾ)	–	ಚಿಕ್ಕಪ್ಪ, ತಂದೆಯ ತಮ್ಮ/ಅಣ್ಣ
ಕಾಕೀ–ಕಕ್ಕೀ (ಫಾ)	–	ಚಿಕ್ಕಪ್ಪ/ದೊಡ್ಡಪ್ಪನ ಹೆಂಡತಿ
ಕಾಗದ (ಅರ)	–	ಪತ್ರ, ಚೀಲ, ಕಾಗದ, ಹಾಳೆ
ಕಾಗದೀ (ಅರ)	–	ಬರಹದಲ್ಲಿಯ
ಕಾಜಲ್(ಫಾ)	–	ಕಾಡಿಗೆ
ಕಾಜೀ (ಅರ)	–	ಮುಸಲ್ಮಾನ ನ್ಯಾಯಾಧೀಶ
ಕಾನೂ(ನು)	–	ಕಾನೂನು, ನಿಯಮ
ಕಾಫರ (ಅರ)	–	ನಾಸ್ತಿಕ, ಇಸ್ಲಾಂ ಧರ್ಮವನ್ನು ನಂಬದವ
ಕಾಫಲಾ (ಅರ)	–	ತಂಡ, ಗುಂಪು
ಕಾಬಾ (ಅರ)	–	ಪವಿತ್ರ ಶಿಲೆ
ಕಾಬೀಜ (ಅರ)	–	ಕೈವಶಪಡಿಸಿದ, ಪ್ರಾಪ್ತ, ಹಸ್ತಗತ
ಕಾಬೀಲ್ (ಅರ)	–	ಚತನ, ಕುಶಲ
ಕಾಮ(ಫಾ)	–	ಕೆಲಸ
ಕಾಮಕಾಜ (ಫಾ)	–	ಕೆಲಸ, ಹೊರೆ
ಕಾಮಗಾರ (ಫಾ)	–	ಕಾರ್ಮಿಕ, ನೌಕರ, ದುಡಿಯುವವ
ಕಾಮಧಂಧಾ (ಫಾ)	–	ಕೆಲಸ, ಬೊಗಸೆ
ಕಾಯದಾ (ಅರ)	–	ವಿಧಿನಿಯಮಗಳು
ಕಾಯದೇಶೀರ್ (ಅರ)	–	ಸಕ್ರಮ, ಕಾನೂನುಬದ್ಧ
ಕಾಯಮ್ (ಅರ)	–	ಸ್ಥಿರ, ಬಾಳುವ

ಕಾಯಮ್‌ತರೀಕ್ (ಅರ) – ಸ್ಥಿರವಾಗಿ, ಕಾಯಂ ಆಗಿ

ಕಾಯಾಸ (ಅರ) – ಅಂದಾಜು, ಊಹೆ

ಕಾಯಿ (ಫಾ) – ಪಾಚಿ, ಕಡು ಹಸಿರು

ಕಾಯಿಲೆ, ಕಾಹಿಲೆ, ಖಾಯಿಲೆ(ಅರ)– ವ್ಯಾಧಿ, ರೋಗ, ಅಸ್ವಸ್ಥತೆ, ಅನಾರೋಗ್ಯ

ಕಾರಕೀರ್ದ್(ಫಾ) – ಆಡಳಿತ, ರಾಜಕಾಲ

ಕಾರಕುನೀ (ಫಾ) – ಕಾರಕೂನನ ಪದ, ವ್ಯವಸಾಯ

ಕಾರಕೂನ (ಫಾ) – ಕರಣಿಕ, ಲೇಖನಿಗ

ಕಾರಖಾನದಾರ (ಫಾ) – ಉದ್ಯೋಗಪತಿ, ಕಾರಖಾನೆಯ ಒಡೆಯ

ಕಾರಖಾನಾ (ಫಾ) – ಕಾರ್ಖಾನೆ, ದೊಡ್ಡ ಉದ್ಯೋಗ,ಫ್ಯಾಕ್ಟರಿ

ಕಾರಖಾನನೀಸ, ಕಾರಖಾನೀಸ್ (ಫಾ) – ಸರಕಾರಿ ಧಾನ್ಯ ಸಂಗ್ರಹಾಲಯಗಳನ್ನು ನೋಡಿಕೊಳ್ಳುವ

ಕಾರಂಜೆ (ಫಾ) – ಊಟೆ, ಒರತೆ, ನೀರುಬುಗ್ಗೆ

ಕಾರಭಾರ (ಫಾ) – ಆಡಳಿತ, ರಾಜ್ಯವ್ಯವಸ್ಥೆ, ಹಿರಿಯತನ

ಕಾರಭಾರೀ (ಫಾ) – ಆಡಳಿತಗಾರ, ದಿವಾಣ

ಕಾರವಾಈ (ಫಾ) – ಕೆಲಸ, ಏರ್ಪಾಡು, ಒಳಸಂಚು, ಹೊಂಚು, ಕಾನೂನು ವ್ಯವಹಾರ,

ಕಾರವಾನ (ಫಾ) – ವ್ಯಾಪಾರಸ್ಥರ ತಂಡ–ಒಂಟೆಯ ಸಾಗಾಣಿಕೆ

ಕಾರಸ್ಥಾನ (ಫಾ) – ಒಳಸಂಚು, ದ್ರೋಹ

ಕಾರಸ್ಥಾನೀ (ಫಾ) – ಕುಟಿಲ, ಹೊಂಚು ಹಾಕುವವ

ಕಾರೇಗಾರ, ಕಾರೇಕಾರ, ಕಾರೀಗರ್(ಫಾ) – ಕುಶಲಕಾರ್ಯಗಳನ್ನು ಮಡುವವನು, ಶಿಲ್ಪಿ, ಕೈಕೆಲಸಗಾರ

ಕಾಲವಾ (ಪೋ) – ಕಾಲುವೆ, ನದಿಯಿಂದ ತೆಗೆದ ಪ್ರವಾಹ

ಕಾಸದಾರ, ಕಾಸುದಾರ, ಖಾಸದಾರ (ಫಾ)– ಕುದುರೆ ಸೇವಕ, ಆಳು, ಗುಲಾಮ

ಕಿತ್‌ಕಿತ್ – ಕಿಲಿಕಿಲಿ (ಫಾ) – ಗಲಾಟೆ, ತಲೆಹರಟೆ

ಕಿತಾಬ (ಅರ) – ಉಪಾಧಿ, ಪದವಿ, ಯೋಗ್ಯತೆ, ಪುಸ್ತಕ

ಕಿತಾಬಖಾನಾ (ಅರ+ಫಾ) – ಪುಸ್ತಕಾಲಯ, ಪುಸ್ತಕ ಅಂಗಡಿ

ಕಿತ್ತಾ (ಅರ) – ಅನುಕರಿಸಲು ಯೋಗ್ಯ, ಅನುಕರಣ

ಕಿತ್ತಾನ್–ಕತಾನ್–ಕತ್ತಾನ್(ಅರ)–		ಒಂದು ಬಗೆಯ ನಾರಿನ ಬಟ್ಟೆ
ಕಿರ್ದ (ಕಿರ್ದಿ) (ಫಾ)	–	ಲೆಕ್ಕದ ಪುಸ್ತಕ
ಕಿನಾರ (ಫಾ)	–	ದಂಡೆ, ದಡ, ನದಿ–ಸಮುದ್ರಗಳ ದಡ
ಕಿಫಾತು (ಅರ)	–	ಅಪಮಾನ, ಫಜೀತಿ
ಕಿಫಾಯಿತಿ (ಅರ)	–	ಅಲ್ಪಬೆಲೆಯ, ಲಾಭದಾಯಕ
ಕಿಮಯಾ (ಅರ–ಫಾ)	–	ಗೂಢವಿದ್ಯೆ
ಕಿಮ್ಮತ (ಅರ)	–	ಬೆಲೆ, ಯೋಗ್ಯತೆ, ಶ್ರೇಷ್ಠತೆ
ಕಿಮಾನ (ಅರ)	–	ತೀರಕಡಿಮೆ
ಕಿರಾಯಾ (ಅರ)	–	ಬಾಡಿಗೆ, ಕೂಲಿ
ಕಿಲವತ್ (ಅರ)	–	ಏಕಾಂತ
ಕಿಲ್ಲತ್ತು, ಖಿಲ್ಲತ್ತು–ಖಿಲಅತ್ (ಅರ)–		ಉಡುಗೊರೆ
ಕಿಲಾಪ, ಕಿಲಾಪು(ಅರ), ಖಿಲಾಪ್–		ವ್ಯಾಜ್ಯ, ಜಗಳ
ಕಿಲ್ಲಾ (ಅರ)	–	ಕೋಟೆ, ಕೊತ್ತಳ, ಭದ್ರದುರ್ಗ
ಕಿಲ್ಲೀ (ಫಾ)	–	ಬೀಗದಕೈ, ಯಶಸ್ಸಿನ ಸಾಧನ
ಕಿಲ್ಲೇದಾರ (ಫಾ)	–	ಕೋಟೆಯ ದಳಪತಿ
ಕಿಸ್ತ–ಖಿಸ್ತ (ಅರ)	–	ಕಂತು, Installment
ಕಿಸ್ಮ–ಕಿಸಮು (ಅರ)	–	ಬಗೆ, ಪ್ರಕಾರ, ಭೇದ
ಕಿಸಾನ್ (ಫಾ)	–	ರೈತ, ಬೇಸಾಯಗಾರ
ಕಿಸೆ, ಖಿಸೆ–ಕಿಸಾ (ಫಾ)	–	ಜೇಬು
ಕಿಂಕಾಪು, ಕಿನಕಾಪು, ಕಿನಖಾಬ್ (ಫಾ)	–	ಚಿನ್ನ ಅಥವಾ ಬೆಳ್ಳಿಯ ಎಳೆಗಳನ್ನು ಸೇರಿಸಿ ನೇಯ್ದ ರೇಷ್ಮೆ ಬಟ್ಟೆ
ಕೀರ್ದ (ಫಾ)	–	ಲೆಕ್ಕದ ಪುಸ್ತಕ, ಖಾತೆಕಿರ್ದಿ
ಕೀಮಾ, ಖೀಮಾ (ಅರ)	–	ಮಾಂಸ ಭಕ್ಷ್ಯ
ಕುರಾನ (ಅರ)	–	ಇಸ್ಲಾಂ ಧರ್ಮದ ಪವಿತ್ರ ಗ್ರಂಥ ಕುರಾನ
ಕುರುಬಾನಿ–ಕುರ್ಬಾನ್ (ಅರ)–		ಬಲಿಕೊಡುವುದು
ಕುರ್‍ರಾ (ಅರ)	–	ಧಿಮಾಕು, ಡೌಲು
ಕುಂಚೀ (ಫಾ)	–	ಬೀಗದ ಕೈ

ಕುತನಿ (ಅರ+ಫಾ)	–	ಅರ್ಧಹತ್ತಿ ಅರ್ಧ ರೇಷ್ಮೆಯಿಂದ ತಯಾರಿಸಿದ ಬಟ್ಟೆ
ಕುದರತ್ತು–ಕುದೂರತ್(ಅರ)	–	ದೈವಿಕಶಕ್ತಿ
ಕುಲ್ (ಅರ)	–	ಒಟ್ಟು
ಕುರ್ಲಖ್ತಿಯಾರ (ಫಾ)	–	ಸಂಪೂರ್ಣ ಅಧಿಕಾರ, ಒಟ್ಟು ಮುಖ್ತಾರ
ಕುಲಮುಖ್ತ್ಯಾರ (ಅರ)	–	ಪೂರ್ಣಾಧಿಕೃತ
ಕುಲಾಯಿ–ಕುಲಾವಿ–ಕುಲ್ಲಾದ(ಅರ)	–	ಮಕ್ಕಳ ತಲೆ ಟೊಪ್ಪಿಗೆ, ಎಳೆ ಮಕ್ಕಳ ತಲೆಗೆ ಕಟ್ಟುವ ಟೊಪ್ಪಿಗೆ
ಕುಲೂಪ (ಅರ)	–	ಬೀಗ, ಕೀಲಿ
ಕುವತ್ (ಅರ)–ಕೋತ	–	ಶಕ್ತಿ, ಸಾಮರ್ಥ್ಯ, ಕಸುವು
ಕುಶಾಲು –ಖುಶ್‌ಹಾಲ್ (ಫಾ)	–	ಸಂತೋಷ, ಹರ್ಷ, ಕ್ಷೇಮ
ಕುಸಕಿ–ಖುಶ್ಕಿ (ಫಾ)	–	ಒಣಬೇಸಾಯ, ಭೂಮಿ
ಕುಸ್ತೀ (ಫಾ)	–	ಮಲ್ಲಯುದ್ಧ, ಕುಸ್ತೀ
ಕೂಚ್ (ಫಾ)	–	ಪಯಣ, ಪ್ರಸ್ಥಾನ, ಸೈನಿಕರ ಮುನ್ನಡೆ
ಕೂಜ, ಕೂಜೆ, ಹೂಜಿ, ಕುಜಾಹ್(ಫಾ)	–	ಉದ್ದವಾದ ಕತ್ತುಳ್ಳ ಪಾತ್ರೆ, ಹೂಜಿ
ಕೈದ (ಅರ)	–	ದಸ್ತಗಿರಿ, ಬಂಧನ, ಕೈದು
ಕೈದಖಾನಾ (ಅರ+ಫಾ)	–	ಸೆರೆಮನೆ, ಜೈಲು
ಕೈಫ್ (ಅರ)	–	ಅಮಲು, ಉನ್ಮತ್ತತೆ
ಕೈಫಿಯತ್ (ಅರ)	–	ವಿಶದಪಡಿಸುವಿಕೆ, ಹೇಳಿಕೆ
ಕೊತವಾಲ (ಫಾ)	–	ನಗರರಕ್ಷಕ, ನಗರಪತಿ
ಕೊತವಾಲೀ (ಫಾ)	–	ನಗರರಕ್ಷಕನ ಕಾರ್ಯಾಲಯ
ಕೊಸರು–ಕಸ್ರ (ಅರ)	–	ಹೆಚ್ಚಾದ ಆಶೆ, ಹೆಚ್ಚಳ, ಬಹಳ ಕಡಿಮೆ/ ಸ್ವಲ್ಪ
ಕೋಮು–ಕೌಮ್ (ಅರ)	–	ಜಾತಿ, ಪಂಗಡ
ಕೋಶಿಸ್ (ಫಾ)	–	ಪ್ರಯತ್ನ
ಕೋರ (ಅರ) ಖೋರ್	–	ಇಂಥದ್ದನ್ನು ಮಾಡುವವನು, ನಿರತನಾದವನು ಎಂಬ ಅರ್ಥದಲ್ಲಿ

		ಸೇರುವ ತದ್ಧಿತ ಪ್ರತ್ಯಯ, ಉದಾ- ಚಾಡಿಕೋರ, ತಂಟೆಕೋರ
ಕೌಲ್ (ಅರ)	–	ತೀರ್ಪು, ಆಜ್ಞೆ
ಕೌಲಕರಾರ (ಅರ)	–	ಒಪ್ಪಂದಪತ್ರ
ಕೌಲನಾಮಾ (ಅರ)	–	ಒಪ್ಪಂದಪತ್ರ
ಕೌಸ್ (ಅರ)	–	ಅಂತರವನ್ನು ಕಡಿಮೆ ಮಾಡುವ ವಿಧಾನ

*

ಖ

ಖರ್ಚ (ಫಾ)	–	ವ್ಯಯ, ಖರ್ಚು, ಬಳಕೆ
ಖರ್ಚಪಟ್ಟಿ (ಫಾ)	–	ವಿವಿಧ ಖರ್ಚಿನ ಸೂಚಿ,ವ್ಯಯದ ಮೇಲಿನ ಕರ
ಖಚಾಖಚ್ (ಫಾ)	–	ಒತ್ತೊತ್ತಾಗಿ ದಟ್ಟವಾಗಿ
ಖಜಾಂಚಿ (ಫಾ) ಖಜಾನ್‌ಚಿ	–	ಖಜಾನೆಯ ಅಧಿಕಾರಿ, ಭಂಡಾರಿ
ಖಜೀನದಾರಿ (ಅರ)	–	ಕೋಶಾಧ್ಯಕ್ಷತೆ, ಭಂಡಾರಿಯ ಕೆಲಸ
ಖಜೀನಾ (ಅರ)	–	ಬೊಕ್ಕಸ ಖಜಾನೆ
ಖಜೀನದಾರ (ಅರ)	–	ಬೊಕ್ಕಸದ ಅಧಿಕಾರಿ
ಖಂಜೀರ್ (ಅರ)	–	ಕಿರುಗತ್ತಿ, ಕಟಾರಿ
ಖಜೀಲ್ (ಅರ)	–	ಅಪಮಾನಿತ, ನಾಚಿಕೆಯಾಗುವ ಲಜ್ಜಿತ
ಖಜೂರಿ (ಫಾ)	–	ಒಂದು ಗಿಡ, ಖರ್ಜೂರ ವೃಕ್ಷ
ಖಜ್ಜೂರ್ (ಫಾ)	–	ಖರ್ಜೂರ
ಖಟಮಲ್ (ಫಾ)	–	ತಗಣಿಕೆ (ಖಾಟ್+ಮಲ್)
ಖತ (ಅರ)	–	ಕೈಬರಹ, ಬರವಣಿಗೆ, ಕಾಗದಪತ್ರ
ಖತರನಾಕ್ (ಫಾ)	–	ಭಯಂಕರ, ಅಪಾಯಕಾರಿ
ಖತಲು, ಖತಲ್ (ಅರ)	–	ಕೊಲೆ, ವಧೆ
ಖತೀಬ (ಅರ)	–	ಮಸೀದಿಯಲ್ಲಿ ಖುತ್ಬ ಪಠಿಸುವವನು
ಖತಂ–ಖತಮ್ (ಅರ)	–	ಮುಕ್ತಾಯ, ಸಮಾಪ್ತಿ

ಖದರ್ (ಅರ)	–	ಗುಣ, ಪ್ರಭಾವ, ಶಕ್ತಿ
ಖಂದಖ್ (ಅರ)	–	ಕಂದಕ, ಕೋಟೆಯ ಸುತ್ತಲೂ ತೋಡಿದ ಕಾಲುವೆ
ಖದೀಮ-ಕದೀಮ (ಅರ)	–	ಪ್ರಾಚೀನ, ಹಳೆಯ
ಖಂಡೀ (ಫಾ)	–	೨೦ ಮಣತೂಕ (೨೦೦ ಕಿಲೋಗ್ರಾಮ್)
ಖಬರ್ (ಅರ)	–	ಸುದ್ದಿ ಸಮಚಾರ, ಎಚ್ಚರಿಕೆ
ಖಬರದಾರ (ಫಾ)	–	ಜೋಕೆ, ಸಾವಧಾನ, ಜಾಗರೂಕ, ಎಚ್ಚರಿಕೆ
ಖಬರದಾರೀ (ಫಾ)	–	ಎಚ್ಚರಿಕೆ, ಜೋಕೆ ಜತನ
ಖಬರಬಾರ (ಫಾ)	–	ಸುದ್ದಿ ಸಮಾಚಾರ, ಮಾತುಕತೆ
ಖಮೀಸ್ (ಜ) (ಅರ)	–	ಅಂಗಿ, ಶರ್ಟು
ಖಯಾಲಿ, ಖಯಾಲು, ಖ್ಯಾಲ್ (ಅರ)	–	ಇಷ್ಟ, ಮರ್ಜಿ, ಆಸಕ್ತಿ, ಮೋಹ, ವಿಚಾರ, ಪರಿಕಲ್ಪನೆ, ರಸಿಕ
ಖರಬೂಜ (ಫಾ)	–	ಸೀಮೆ ಸೌತೆಹಣ್ಣು, ಕರಬೂಜ ಹಣ್ಣು
ಖರಾಬ (ಫಾ)	–	ಕೆಟ್ಟುಹೋದ ಆಶಕ್ತನಾದ
ಖರಾಬೀ (ಫಾ)	–	ಕೇಡು, ನಾಶ, ಹಾಳು, ದೋಷ
ಖರಾರಾ (ಫಾ)	–	ಕುದುರೆ ತೊಳೆಯುವ ಬಾಚಣಿಕೆ
ಖರಾ-ಖರೀ-ಖರೆ	–	ಸ್ಪಷ್ಟ, ಸತ್ಯ ಶುದ್ಧ, ಉತ್ತಮ, ನಿಜವಾದ
ಖರೀ (ಫಾ)	–	ಬಂಡೆಯಮೇಲೆ ಮಾಡಿದ ಸಾಗುವ
ಖರೀತ, ಕರೀತ (ಅರ)	–	ಪತ್ರಗಳನ್ನು ಹಾಕಿ ಒಯ್ಯುವ ಚೀಲ, ನಿರೂಪ
ಖರೀಪ (ಅರ)	–	ಹಿಂಗಾರಿ ಬೆಳೆ
ಖರೀದಿ (ಫಾ)	–	ಕೊಳ್ಳುವಿಕೆ
ಖರೂಜ (ಅರ)	–	ಕಜ್ಜಿ ಹುಣ್ಣು
ಖರೇದಿವಿಕ್ರಿ (ಫಾ)	–	ಲೇವಾದೇವಿ, ಮಾರಾಟ ವ್ಯವಹಾರ ಕೊಳ್ಳುವುದು
ಖಲಬತ್ (ಅ)	–	ಗುಪ್ತ ಮಾತುಕತೆ, ಒಳಸಂಚು
ಖಲಬತ್ತಾ (ಫಾ)	–	ಒರಳು, ಕಲಬತ್ತು
ಖಲಂದರ್	–	ಆಧ್ಯಾತ್ಮಿಕ ಚಕ್ರವರ್ತಿ, ದರವೇಶಿ, ಸೂಫಿ

ಖಲಾಶೀ (ಅರ)	–	ಹಡಗು ಪಡೆಯ ಸೈನಿಕ, ಕೂಲಿಕಾರ
ಖಲಾಸ್ (ಅರ)	–	ಮುಗಿದ, ತೀರಿದ, ಸತ್ತ, ಹಾಳಾದ
ಖಲಿತಾ (ಅರ)	–	ಪತ್ರ, ಗುಪ್ತಪತ್ರ
ಖಲಿಂದರ (ಅರ)	–	ಮಹಮ್ಮದೀಯ ಬೈರಾಗಿ
ಖಲೀಫ (ಅರ)	–	ಮಹಮ್ಮದ ಪೈಗಂಬರ ಉತ್ತರಾಧಿಕಾರಿ
ಖವಾಸ್ (ಫಾ)	–	ಗಣ್ಯ, ದಾಸಿ, ಸೂಳೆ
ಖವೀಸ್ (ಅರ)	–	ಕೆಟ್ಟವ, ದುಷ್ಟ, ದೈತ್ಯ, ಸೈತಾನ
ಖಸ್ (ಫಾ)	–	ಹೀನಾ ಎಂಬ ಸುಗಂಧೀ ದ್ರವ್ಯ
ಖಸ್ತ (ಫಾ)	–	ಹೊಲಸು, ಪರಿಶ್ರಮ
ಖಾಕಿ (ಫಾ)	–	ಧೂಳು ಬಣ್ಣದ, ಮಾಸಲು ಹಳದಿಯ ಬಟ್ಟೆ
ಖಾಕಿ (ಫಾ)	–	ಕೈಯಿಂದ ನೂಲು ತೆಗೆದ ಬಟ್ಟೆ
ಖಾಕೀ (ಫಾ)	–	ಮಣ್ಣಿನ ಮನುಷ್ಯ, ಮಣ್ಣಿನ ಬಣ್ಣದ
ಖಾಜಗೀ (ಫಾ)	–	ವ್ಯಕ್ತಿಗತ ತನ್ನ
ಖಾಜಗತ್ (ಫಾ)	–	ತಮ್ಮ ತಮ್ಮೊಳಗೆ
ಖಾಜ್ (ಫಾ)	–	ತುರಿ, ತೀಟೆ, ತಿಂಡಿ
ಖಾತರ (ಅರ)	–	ಅಭಿವಚನ (ಖಾತರೀ)
ಖಾತರಜಮಾ (ಫಾ)	–	ಭರವಸೆ
ಖಾತ್ರೀ (ಫಾ)	–	ವಿಶ್ವಾಸ, ಭರವಸೆ
ಖಾತ್ರೀಲಾಯಕ (ಫಾ)	–	ವಿಶ್ವಾಸಾರ್ಹ, ನಂಬುಗೆಯೋಗ್ಯ
ಖಾತೆದಾರ್ (ಫಾ)	–	ಖಾತೆ ಇಟ್ಟವ (ಬ್ಯಾಂಕ ಮುಂತಾದವುಗಳಲ್ಲಿ)
ಖಾತೆವಹೀ (ಫಾ)	–	ಖಾತೆಯ ಪುಸ್ತಕ
ಖಾತೆ (ಫಾ)	–	ಲೆಕ್ಕ, ಆಡಳಿತ ವಿಭಾಗ, ಇಲಾಖೆ
ಖಾತೆಬಾಕಿ (ಫಾ)	–	ಉಳಿದ ಮೊತ್ತ
ಖಾದ್ (ಫಾ)	–	ಕೂಳು, ಆಹಾರ, ಲಾಲಸೆ
ಖಾನ–ಇ–ಸಾಮಾನ (ಫಾ)	–	ಅರಮನೆಯ ಒಳಮೆಯ ಮುಖ್ಯಸ್ಥ
ಖಾನಬಾ	–	ಸೂಫಿ ಮಠ/ಸೂಫಿ ಸಂಚರಿತ್ರೆಯ ಮೊದಲ ಘಟ್ಟ

ಖಾನಜಂಗೀ (ಫಾ)	–	ಬಿರುಸಿನ ಯುದ್ಧ, ಖಾಡಾಖಾಡೀ ಕಾಳಗ
ಖಾನಗೀ, ಖಾನಿಗೆ (ಫಾ)	–	ಮನೆಗೆ ಸಂಬಂಧಿಸಿದ, ಮನೆತನಕ್ಕೆ ಸಂಬಂಧಪಟ್ಟ, ಖಾಸಗಿ, ಖಾಸಗೀ ಕಚೇರಿ, ಸ್ವಂತ ಕಾರ್ಯಾಲಯ
ಖಾನದಾನ(ಫಾ)	–	ಮನೆತನ, ಕುಲೀನ ಕುಟುಂಬ
ಖಾನದಾನೀ (ಫಾ)	–	ಕುಲೀನ ಕುಟುಂಬದವ
ಖಾನಸಾಮಾ (ಅರ+ಫಾ)	–	ಅಡುಗೆಯವ
ಖಾನ್ (ಫಾ)	–	ಮುಸಲ್ಮಾನರ ಅಡ್ಡಹೆಸರು, ಉಪಾಧಿ ಸೈನಿಕ, ಮುಖ್ಯಸ್ಥ
ಖಾನಾ (ಫಾ)	–	ಮನೆ, ಅಂಕಣ, ಸ್ತಂಭ, ಊಟ, ಮೇಜವಾನಿ
ಖಾನಾವಳ್ (ಫಾ)	–	ಊಟದ ಅಂಗಡಿ
ಖಾನೇಸುಮಾರಿ (ಫಾ)	–	ಜನಗಣನೆ
ಖಾಬಿಲ್ (ಅರ)	–	ಯೋಗ್ಯ, ಅರ್ಹ
ಖಾಬೂ–ಕಾಬೂ (ಅರ)	–	ಅಂಕೆಯಲ್ಲಿ ತರು
ಖಾಮೋಶ್ (ಫಾ)	–	ಸ್ತಬ್ಧ, ಮಾತನಾಡದ
ಖಾಯಿಷ್ (ಫಾ)	–	ಬಯಕೆ, ಇಚ್ಛೆ
ಖಾಲಸಾ (ಅರ)	–	ರಾಜ್ಯ, ರಾಜ್ಯದ ಸರಕಾರೀಭೂಮಿ ಪ್ರಾಂತ, ಸರಕಾರ ಸ್ವಾಧೀನ
ಖಾಲೀ (ಅ)	–	ಬರಿದಾದ
ಖಾವಿಂದ (ಫಾ)	–	ಸ್ವಾಮಿ, ದೊರೆ
ಖಾಸಗೀ–ಖಾನಗೀ (ಫಾ)	–	ಸರಕಾರಿಯಲ್ಲದ ಸ್ವಂತದ
ಖಾಸದಾರ್ (ಫಾ)	–	ವಿಶೇಷ ನಿರೀಕ್ಷಕ, ಪಾಲಕ
ಖಾಸಬಾರಗೀರ್ (ಫಾ)	–	ಅರಸನ ಕುದುರೆಸೈನ್ಯ
ಖಾಸ್‌ಖಬರ್ (ಫಾ)	–	ವಿಶಿಷ್ಟ ಸುದ್ದಿ
ಖಾಸ್ (ಫಾ)	–	ಸ್ವಂತ, ಖಾಸಗೀ, ಆಯ್ದ
ಖಾಸ್‌ಗತ್ (ಫಾ)	–	ಖಾಸಗೀ, ವೈಯಕ್ತಿಕ

ಖಾಸ್‌ಬಾತಮಿ (ಫಾ)	–	ವಿಶೇಷ ಸುದ್ದಿ
ಖಾಸಾ (ಅರ)	–	ಮುಖ್ಯ, ಉತ್ತಮ, ಉತ್ಕೃಷ್ಟ
ಖ್ಯಾಸ್ (ಅರ) ಕಯೂಸ್	–	ಅಂದಾಜು ಕಲ್ಪನೆ
ಖ್ಯಾಲ (ಅರ)	–	ವಿಚಾರ, ಪದ್ದತಿ
ಖ್ಯಾಲಿ ಖುಶಾಲೀ (ಅರ)	–	ಖುಶಿ, ಆನಂದ, ವಿಲಾಸ
ಖಿರ್ಕಾ	–	ಸಾಧನೆ ಮುಗಿದ ಶಿಷ್ಯನಿಗೆ ಗುರು ನೀಡುವ ವಸ್ತ್ರ
ಖಿಜ್ರ	–	ಅಮೃತವನ್ನು ತೋರುವ ದೇವತೆ, ಗುರು
ಖಿದವುತ್ (ಅರ)	–	ಸೇವೆ, ನೌಕರಿ ಚಾಕರಿ
ಖಿಲ್ಲತ್	–	ಮರ್ಯಾದೆಗಾಗಿ ಕೊಡುವ ವಸ್ತ್ರ, ಮೇಲಾಧಿಕಾರಿ ಕೆಳಗಿನವನಿಗೆ ಕೊಡುವ ಪ್ರಶಸ್ತಿ
ಖಿಲ್ಲತ್ ಖಚೋರ್ಬಿ	–	ಕಸೂತಿ ವಸ್ತ್ರಗಳ ಕಾಣಿಕೆ
ಖಿಲ್ಲತ್ ಮಹತಾಬೀ	–	ಕಸೂತಿ ವಸ್ತ್ರಗಳ ಕಾಣಿಕೆ
ಖಿಲಾಫತ್	–	ಉತ್ತರಾಧಿಕಾರತ್ವ
ಖಿಲಾಫತ್‌ನಾಮಾ	–	ಸೂಫಿ ಗುರುವಿನ ಮರಣಶಾಸನ
ಖಿಸ್‌ಮಿಸ್ (ಫಾ)	–	ದ್ವೀಪದ ದ್ರಾಕ್ಷೆ, ಒಣಗಿದದ್ರಾಕ್ಷೆ
ಖಿಸಾ (ಫಾ)	–	ಜೇಬು, ಬೊಕ್ಕಣ, ಕಿಸೆ
ಖಿಸ್ತೀ (ಅರ)	–	ಸಾಲಕೊಡುವವ ಸಾಹುಕಾರ
ಖಿಸೇಕಾಪು	–	ಜೇಬುಗಳ್ಳ, ಕಿಸೆಕತ್ತಿರಿಸುವವ
ಖೀರ್	–	ಪಾಯಸ
ಖುಜಾ (ಫಾ)	–	ಮಣ್ಣಿನ ಪಾತ್ರೆ, ಗಿಡ್ಡ ವ್ಯಕ್ತಿ
ಖುತಬಾ	–	ಸಾಮೂಹಿಕ ಮಸೀದಿಯಲ್ಲಿಯ ಶುಕ್ರವಾರದ ಪ್ರಾರ್ಥನೆ
ಖುರ್ದ (ಫಾ)	–	ಚಿಕ್ಕ, ಗಿಡ್ಡ (ಕಡಿಮೆ ಜನಸಂಖ್ಯೆಯ ಹಳ್ಳಿ)
ಖುದ್‌ಕುಷಿ (ಫಾ)	–	ಆತ್ಮಹತ್ಯೆ
ಖುದ್ದ (ಫಾ)	–	ಸ್ವತಃ, ತಾನು

ಖುದಾಸರಕಾರ	–	ದೇವರ ಸರಕಾರ
ಖುದಾ (ಫಾ)	–	ದೇವರು
ಖುದಾದಾದ್	–	ದೇವರಕೊಡುಗೆ
ಖುದಾವಂತ (ಫಾ)	–	ಸ್ವಾಮಿ ದೊರೆ
ಖುನಶೀ (ಫಾ)	–	ಸೇಡು ತೀರಿಸಲು ಹವಣಿಸುವ
ಖುನೀ (ಫಾ)	–	ಕೊಲೆಗಡುಕ, ಕೊಲೆಪಾತಕಿ
ಖುಬಸೂರತ್ (ಫಾ)	–	ಸುಂದರ, ಅಂದವಾದ
ಖುಬೀ (ಫಾ)	–	ಜಾಣತನ, ಚತುರತನ, ಉಪಾಯ, ಹಂಚಿಕೆ
ಖುಬೀದಾರ (ಫಾ)	–	ಚತುರ
ಖುಮ್‌ಖುಮ್ (ಫಾ)	–	ಜಗಳದತೀಟೆ, ಉತ್ಸಾಹ, ಹುರುಪು (ಕುಮಕುಮಿ)
ಖುಮ್‌ಖುಮೀ (ಫಾ)	–	ಜಗಳದತೀಟೆ, ಉತ್ಸಾಹ, ಹುರುಪು (ಕುಮಕುಮಿ)
ಖುಮಾರೀ (ಫಾ)	–	ರುಚಿ, ಸ್ವಾದ, ಅಮಲೇರು
ಖುಮಾಸ್‌ದಾರ್ (ಫಾ)	–	ಕಮ್ಮಗಾದ, ರುಚಿಕಟ್ಟಾದ
ಖುರಾಕ್ (ಫಾ)	–	ಶಕ್ತಿವರ್ಧಕ ತಿನಿಸು, ಲಂಚ, ಪ್ರಲೋಭನ
ಖುರಾಕ್–ಇ	–	ಮೇವು ಪಶು ಆಹಾರ ಭತ್ಯ
ಖುರ್ಚೀ (ಅರ) ಕುರ್ಸೀ	–	ಕುರ್ಚಿ, ಚೇರ
ಖುರ್ದ (ಫಾ)	–	ಸಣ್ಣ, ಚಿಕ್ಕ ಊರು
ಖುರ್ದಾ (ಫಾ)	–	ಚಿಲ್ಲರೆ
ಖುಲಾ (ಅರ)	–	ಬರಿದಾದ, ಖಾಲಿಯಾದ ಮುಕ್ತ (ಖುಲ್ಲಾ)
ಖುಲಾಸ್ (ಅರ)	–	ಮನಸೋಕ್ತ, ಪ್ರಾಮಾಣಿಕ
ಖುಲಾಸಾ (ಅರ)	–	ಸ್ಪಷ್ಟೀಕರಣ, ಭಾಷ್ಯ, ಸಾರಾಂಶ
ಖುಲಾಸೇವಾರ (ಫಾ)	–	ವಿಶದವಾಗಿ, ತಪಶೀಲವಾರು
ಖುಷಕೀ (ಖುಶ್ಕೀ) (ಫಾ)	–	ಭೂಮಿ ಮೇಲಿನ ರಸ್ತೆ, ಒಣಭೂಮಿ
ಖುಷ್ (ಫಾ)	–	ಸಂತುಷ್ಟ
ಖುಷ್‌ಖಬರ (ಫಾ)	–	ಆನಂದದ ಸುದ್ದಿ

ಖುಶಾಮತ್ (ಫಾ)	–	ಮುಖಸ್ತುತಿ
ಖುಶಾಮತೀ (ಫಾ)	–	ಮುಖಸ್ತುತಿ ಮಾಡುವವ
ಖುಶಾಲ್ (ಫಾ)	–	ಕುಶಲ ಸುರಕ್ಷಿತ, ಕ್ಷೇಮ
ಖುಶಾಲೀ (ಫಾ)	–	ಕ್ಷೇಮಸಮಾಚಾರ
ಖುಶೀ (ಫಾ)	–	ಆನಂದ ಹಿಗ್ಗು
ಖೂಂಟಾ	–	ಗೂಟ ಬೀಸುವಕಲ್ಲಿನ ಹಿಡಿಕೆ, ದನಗಳನ್ನು ಕಟ್ಟುವ ಗೂಟ
ಖೂನ (ಫಾ)	–	ಗುರುತು ಪರಿಚಯ (ರಕ್ತ ಸಂಬಂಧದಿಂದ ಹುಟ್ಟಿದ ಶಬ್ದ)
ಖೂನ್ (ಫಾ)	–	ಕೊಲೆ, ವಧ, ರಕ್ತ
ಖೂನಿ	–	ಕೊಲೆ, ಕೊಲೆಗಡುಕ
ಖೂರ್ (ಫಾ)	–	ಕಾಲು, ಪಶುವಿನಕಾಲಿನ ಕೊಳಗ, ಖುರ
ಖೇಪೆ (ಫಾ) ಕ್ಷೇಪ	–	ಸರದಿ, ಬಾರಿ, ಸಲ, ಪಾಳಿ
ಖೈದಿ	–	ಸೆರೆಯಾಳು
ಖೈದು	–	ದಸ್ತಗಿರಿ, ಸೆರೆಹಿಡಿ
ಖೈರ್ (ಅರ)	–	ಒಳಿತು ಕಲ್ಯಾಣ, ಕ್ಷೇಮ
ಖೈರಾತ್ (ಅರ)	–	ದಾನಧರ್ಮ, ಪ್ರಸಾದ ಹಂಚುವಿಕೆ, ನೈವೇದ್ಯ
ಖೈರಿಯತ್ (ಅರ)	–	ಕ್ಷೇಮ, ಕುಶಲ
ಖೋಗೀರ್ (ಫಾ)	–	ಕುದುರೆ ಜೀನು
ಖೋಜಾ (ಫಾ)	–	ಷಂಢ, ನಪುಂಸಕ
ಖೋತ್, ಖೋತಾ (ಫಾ–ಕೋತಾಹ್)	–	ಕಡಿಮೆ ಮಾಡುವಿಕೆ, ಕಡಿತ, ಭಂಗ

*

ಗ

ಗಜಬ (ಅರ)	–	ಹಾಹಾಕಾರ, ಆಕ್ರೋಶ
ಗಜಮು (ಫಾ)	–	ತಲೆಕೆಳಗಾಗಿ ನಿಲ್ಲುವುದು
ಗಡ (ಫಾ)	–	ಕೋಟೆ
ಗದಡಿ–ಗುದಡಿ (ಫಾ)	–	ಸೂಫಿ ಗುರುಗಳ ಉಣ್ಣೆಯ ನಿಲುವಂಗಿ
ಗದ್ದಿ (ಫಾ)	–	ಗಾದಿ, ಸಿಂಹಾಸನ
ಗನ್ನಾ (ಫಾ)	–	ಕಬ್ಬು
ಗನೀಮ (ಅರ)	–	ಗುಪ್ತವಿರೋಧಿ, ಕಪಟಶತ್ರು, ಕೊಳ್ಳೆ, ಲೂಟಿ
ಗಡಪ್ಪು (ಅರ)	–	ಅಡಗು, ನುಂಗು, ತಿಂದುಹಾಕು
ಗಫಲತ (ಅರ)	–	ದುರ್ಲಕ್ಷ, ತಪ್ಪು
